ಪ್ರತಿಬಿಂಬ

PRATIBIMBA –Multidisciplinary Kannada Research Journal of IIMRD
ISSN: 2582-2284
Vol-7 Issue-2, September-October 2025, Pp. 60-73
©*IIMRD*, Mysuru
IIMRD JOURNALS
www.iimrd.com

# ದುಡಿಮೆಯ ಪರಿಕಲ್ಪನೆ ಮತ್ತು ಸ್ವರೂಪಗಳು

**ಡಾ. ಯಲ್ಲಪ್ಪ ಟಿ.**
ಅಧ್ಯಾಪಕರು, ಕನ್ನಡ ವಿಶ್ವವಿದ್ಯಾಲಯ, ವಿಸ್ತರಣಾ ಕೇಂದ್ರ ದೇವದುರ್ಗ

**ಸಾರಾಂಶ: (Abstract)**

*ಈ ಲೇಖನದಲ್ಲಿ ಭೂರಹಿತ ಕೃಷಿ ದುಡಿಮೆಗಾರರ ದುಡಿಮೆಯ ಪರಿಕಲ್ಪನೆ ಮತ್ತು ದುಡಿಮೆಯ ಸ್ವರೂಪಗಳನ್ನು ಹಾಗೂ ಆ ದುಡಿಮೆಯಿಂದ ಅನುಭವಿಸುವ ಸಂಕಷ್ಟದ ಬದುಕಿನ ಬವಣೆಗಳನ್ನು ಅರ್ಥೈಸುವುದಾಗಿದೆ. ಗ್ರಾಮೀಣ ಪ್ರದೇಶದಲ್ಲಿ ಭೂಮಿ ಇಲ್ಲದವರು ಪ್ರಮುಖವಾಗಿ ಕೃಷಿ ಅವಲಂಬಿತವಾಗಿದ್ದು, ಭೂಮಿಯು ಒಂದು ಮಹತ್ವದ ಸ್ವತ್ತು ಆಗಿದೆ. ಒಂದು ಕುಟುಂಬದ ಆರ್ಥಿಕ, ಸಾಮಾಜಿಕ ಹಾಗೂ ರಾಜಕೀಯ ಸ್ಥಾನಮಾನವು ಅದು ಹೊಂದಿದ ಭೂಮಿಯ ಮೇಲೆ ಅವಲಂಬಿತವಾಗಿದೆ. ಅದು ಬೇಸಾಯವಲ್ಲದೆ ವಿವಿಧ ಚಟುವಟಿಕೆಗಳನ್ನು ಕೈಗೊಂಡು ಕುಟುಂಬದ ಆದಾಯವನ್ನು ವೃದ್ಧಿಸುವಲ್ಲಿ ಮಹತ್ವದ ಪಾತ್ರವಹಿಸುತ್ತದೆ. ಹೀಗಾಗಿ ಮಾನವನ ಅಭಿವೃದ್ಧಿಯು ಭೂಮಿಯ ಒಡೆತನದ ಮೇಲೆ ಅವಲಂಬಿತವಾಗಿರುತ್ತದೆ. ಈ ದೃಷ್ಟಿಯಿಂದ ನೋಡುವುದಾದರೆ ನಮ್ಮ ದೇಶದ ಬಹುತೇಕ ಕುಟುಂಬಗಳು ಭೂಮಿ ಇಲ್ಲದೆ, ಬೇರೆಯವರ ಹೊಲಗದ್ದೆಗಳಲ್ಲಿ ದುಡಿದು ಅದರಿಂದ ಬಂದ ಕೂಲಿಯನ್ನು ನೆಚ್ಚಿಕೊಂಡು ಜೀವನ ಸಾಗಿಸುತ್ತಿದ್ದಾರೆ. ಅಭಿವೃದ್ಧಿಯು ಎಲ್ಲರನ್ನೂ ಒಳಗೊಳ್ಳುವ ಪ್ರಕ್ರಿಯೆಯಾಗಿ ಜಾರಿಯಾಗಬೇಕಾಗಿದೆ. ಅಭಿವೃದ್ಧಿ ಎನ್ನುವುದು ಮಾನವನಿಂದಲೇ ನಡೆಯುವ ಒಂದು ಪ್ರಕ್ರಿಯೆಯಾಗಿದೆ.*

**ಮುಖ್ಯಪದಗಳು (Keywords):** *ಅಭಿವೃದ್ಧಿ, ಕಾರ್ಮಿಕರು, ಭೂರಹಿತ ಕೃಷಿ ಕಾರ್ಮಿಕರು, ದುಡಿಮೆಯ ಸ್ವರೂಪ ಮತ್ತು ಪರಿಕಲ್ಪನೆಗಳು*

## ಪೀಠಿಕೆ

ಕೃಷಿಯಲ್ಲಿ ಅಥವಾ ಹೊಲಗದ್ದೆಯಲ್ಲಿ ತೋಟಗಳಲ್ಲಿ ದುಡಿಯುತ್ತಿರುವ ದುಡಿಮೆಗಾರರ ಅಥವಾ ಭೂರಹಿತ ಕೃಷಿ ದುಡಿಮೆಗಾರರ ಶ್ರಮವು ಇದರಲ್ಲಿ ಒಂದಾಗಿದೆ. ಭೂರಹಿತ ಕೃಷಿ ದುಡಿಮೆಗಾರರು ಹಲವಾರು ಶತಮಾನಗಳಿಂದ ಕಷ್ಟಪಟ್ಟು ದುಡಿಯುತ್ತಿದ್ದರು ತಮ್ಮದೇ ಆದ ಉತ್ತಮ ಬದುಕನ್ನು ಕಟ್ಟಿಕೊಳ್ಳಲು ಸಾಧ್ಯವಾಗುತ್ತಿಲ್ಲ. ಭಾರತದಲ್ಲಿ ಭೂಮಿ ಇಲ್ಲದೇ ಭೂರಹಿತ ಕೃಷಿ ದುಡಿಮೆಗಾರರನ್ನು ಅಧಿಕ ಸಂಖ್ಯೆಯಲ್ಲಿ ಕಾಣಬಹುದು. ಭೂರಹಿತ ಕೃಷಿ ದುಡಿಮೆಗಾರರಿಗೂ ಮತ್ತು ಭೂಮಿಗೆ ಅವಿನಾವಭಾವ ಸಂಬಂಧವಿದೆ. ಭೂಮಿಯನ್ನು ಬಿಟ್ಟು ಇವರ ಜೀವನ ಕ್ರಮವನ್ನು ಅಧ್ಯಯನ ಮಾಡುವುದು ಸಾಧ್ಯವಿಲ್ಲ. ಈ ಲೇಖನದಲ್ಲಿ ಭೂಮಿ ಇಲ್ಲದವರ ದುಡಿಮೆಯನ್ನು ತಾತ್ವಿಕ ನೆಲೆಯಲ್ಲಿ ಚರ್ಚಿಸಿ, ಭೂಮಿ ಇದ್ದವರ

*Please cite this article as:* ಯಲ್ಲಪ್ಪ ಟಿ. (2025). ದುಡಿಮೆಯ ಪರಿಕಲ್ಪನೆ ಮತ್ತು ಸ್ವರೂಪಗಳು. ಪ್ರತಿಬಿಂಬ: *ಮಲ್ಟಿಡಿಸಿಪ್ಲಿನರಿ ಕನ್ನಡ ರೀಸರ್ಚ್ ಜರ್ನಲ್ ಆಫ್ ಐಐಎಂಆರ್‌ಡಿ, 7(2). ಪು.ಸಂ.* 60–73

ಭೂಮಿಯಲ್ಲಿ ಹೇಗೆ? ತಮ್ಮ ಬದುಕನ್ನು ಕಟ್ಟಿಕೊಂಡಿದ್ದಾರೆ ಎಂಬ ಸಂಗತಿಯನ್ನು ಅರ್ಥೈಸುವುದು ಈ ಲೇಖನದ ಉದ್ದೇಶವಾಗಿದೆ.

**ಭೂರಹಿತ ಕೃಷಿ ದುಡಿಮೆಗಾರರ ಪರಿಕಲ್ಪನೆ**

ಮಾನವನ ನಾಗರಿಕತೆಯ ದೀರ್ಘ ಚರಿತ್ರೆಯಲ್ಲಿ ದುಡಿಮೆಯು ಹಲವಾರು ರೀತಿಯಲ್ಲಿ ನಡೆದು ಬಂದಿದೆ. ದುಡಿಮೆಯ ವಿಭಿನ್ನ ನೆಲೆಗಳು ಕೂಡ ಪಲ್ಲಟವಾಗುತ್ತಾ ಸಾಗಿವೆ. ಇಲ್ಲಿ ಭೂರಹಿತ ಕೃಷಿ ದುಡಿಮೆಗಾರರ ಪರಿಕಲ್ಪನೆಯನ್ನು ಮತ್ತು ತಾತ್ವಿಕ ಚರ್ಚೆಯನ್ನು ಮಾಡಲಾಗಿದೆ. ಪ್ರಸ್ತುತ ದಿನಮಾನದಲ್ಲಿ ಕೃಷಿ ದುಡಿಮೆಗಾರರ ಸ್ಥಾನಮಾನದಲ್ಲಿ ಆಗಿರುವ ಬದಲಾವಣೆ ಬಹಳ ಪ್ರಮುಖವಾದದ್ದು. ಈಜಿಪ್ಟ್ ಪರ್ಸಿಯಾ, ರೋಮ್ ಮುಂತಾದ ದೇಶದ ಪುರಾತನ ನಾಗರಿಕತೆಗಳಲ್ಲಿ ಗುಲಾಮರ ದುಡಿಮೆ ಪ್ರಧಾನವಾಗಿತ್ತು. ಅನಂತನದಲ್ಲಿ ಈ ಪದ್ಧತಿ ಬದಲಾಯಿತು. ಊಳಿಗಮಾನ್ಯಶಾಹಿ ಪದ್ಧತಿಯಲ್ಲಿ ದುಡಿಮೆಗಾರರು ಜಮೀನ್ದಾರನಿಂದ ಭೂಮಿಯನ್ನು ಸಾಗುವಳಿಗೆ ಪಡೆದು ಅದಕ್ಕೆ ಪ್ರತಿಫಲವಾಗಿ ಆತನ ಭೂಮಿಯಲ್ಲಿ ಹಲವಾರು ನಿಯಮಗಳಿಗೆ ಮತ್ತು ಷರತ್ತುಗಳಿಗೆ ಬದ್ಧನಾಗಿ ಕೆಲಸ ಅಥವಾ ದುಡಿಮೆ ಮಾಡುತ್ತಿದ್ದರು. ಇವರು ಗುಲಾಮರಂತೆ ಸಂಪೂರ್ಣವಾಗಿ ತಮ್ಮ ವ್ಯಕ್ತಿತ್ವವನ್ನು ಕಳೆದುಕೊಂಡಿರದಿದ್ದರೂ ಈಗಿನ ಬೇಸಾಯಗಾರರಂತೆ ಇವರಿಗೆ ವ್ಯಕ್ತಿ ಸ್ವಾತಂತ್ರ್ಯ ಇರಲಿಲ್ಲ.

ಭಾರತದ ಚರಿತ್ರೆಯನ್ನು ಅವಲೋಕಿಸಿದರೆ ದುಡಿಮೆ ಅನ್ನುವಂತದ್ದು ಉಳ್ಳವರ ಹೊಲಗದ್ದೆಗಳಲ್ಲಿ ಇಲ್ಲದವರು ದುಡಿದು ತಿನ್ನುವ ಅಥವಾ ಅವರು ಕೊಟ್ಟಿದ್ದನ್ನು ಪ್ರಶ್ನಿಸದೆ ತಿಂದು ಮಲಗುವ ಸ್ಥಿತಿಯನ್ನು ಚಾತುರ್ವರ್ಣ ಪದ್ಧತಿಯು ಹುಟ್ಟುಹಾಕಿತ್ತು. ಭಾರತಕ್ಕೆ ಬ್ರಿಟಿಷರು ಬರುವ ಮೊದಲು ದುಡಿಮೆಯನ್ನು ಒಂದು ದಾಖಲು ರೂಪದಲ್ಲಿ ಕಟ್ಟಿಕೊಡಲು ಸಾಧ್ಯವಾಗಿಲ್ಲ. ಈ ದೇಶದಲ್ಲಿ ಚಾತುರ್ವರ್ಣ ಬೇರುಗಳು ಬಹಳ ಪ್ರಬಲವಾಗಿ ಬೇರು ಬಿಟ್ಟಿದ್ದವು. ಪ್ರಸ್ತುತ ಕೂಡ ಆ ಬೇರು ಇನ್ನೂ ಸಡಿಲ ಗೊಂಡಿಲ್ಲ. ಬ್ರಿಟಿಷರು ಬಂದ ನಂತರ ದುಡಿಮೆಯ ತಾತ್ವಿಕ ನಿರೂಪಣೆಗಳನ್ನು (ಪರಿಕಲ್ಪನೆ) ಕಟ್ಟಿಕೊಡಲು ಪ್ರಯತ್ನಿಸಿದರು. ಆಡಳಿತಶಾಹಿ ದಾಖಲೆಗಳು ಹಾಗೂ ಜನಗಣತಿಯಲ್ಲಿ ದುಡಿಮೆ ಅನ್ನುವುದು ಒಂದು ತಾತ್ವಿಕ ನಿರೂಪಣೆಗೆ ಒಳಪಡಿಸಲಾಯಿತು. ಭಾರತಕ್ಕೆ ಸ್ವಾತಂತ್ರ್ಯ ಸಿಕ್ಕ ನಂತರದಲ್ಲಿ ದುಡಿಮೆಯನ್ನು ನಿರ್ದಿಷ್ಟವಾಗಿ ನಿರ್ವಹಿಸುವ ಪ್ರಯತ್ನಗಳು ಆರಂಭವಾದರೂ ದಾಖಲೆ ಮಾಡುವ ಸಂಸ್ಥೆಗಳು ಆಯಾ ಕಾಲಮಾನಕ್ಕೆ ದುಡಿಮೆಯನ್ನು ವಿಭಿನ್ನವಾದ ನೆಲೆಯಲ್ಲಿ ಪರಿಭಾವಿಸಿಕೊಂಡಿರುವುದನ್ನು ಕಾಣಬಹುದಾಗಿದೆ. ಯಾವ ವರ್ಗ ಅಂದರೆ ಇಲ್ಲಿ ಯಾರು ಹಣದ ಮೂಲದ ಒಡೆತನ, ಜಾತಿ, ಅಧಿಕಾರ, ಅಂತಸ್ತು ಇದ್ದು, ಮತ್ತು ಯಾರು ದುಡಿಮೆಯ ಪರಿಕಲ್ಪನೆಯನ್ನು ನಿರ್ವಹಿಸುತ್ತಾರೆ, ಎಂಥಾ ಕೆಲಸವನ್ನು ದುಡಿಮೆ ಎಂದು ಪರಿಗಣಿಸಲಾಗುತ್ತದೆ ಹಾಗೂ ಯಾರನ್ನು ದುಡಿಮೆಗಾರರೆಂದು ಗುರುತಿಸಲಾಗಿದೆ ಎಂಬುದು ಬಹಳ ಪ್ರಮುಖವಾದ ಪ್ರಶ್ನೆಯಾಗಿದೆ. ಭಾರತದಲ್ಲಿ ಸಿಗುವ ನೈಸರ್ಗಿಕ ಸಂಪನ್ಮೂಲವನ್ನು ಬಳಸಿಕೊಳ್ಳಲು ಬ್ರಿಟಿಷರಿಗೆ ದುಡಿಮೆಗಾರರ ಅಗತ್ಯವಿತ್ತು. ಇಲ್ಲಿನ ಜನರು ಬಹುತೇಕವಾಗಿ ಅವಿದ್ಯಾವಂತರಾಗಿದ್ದರು. ಜಾತಿಯ ಬೇರುಗಳು ಏಣಿಯ ಬುಡದಲ್ಲಿರುವಂತಹ ವರ್ಗಕ್ಕೆ ಜನರಿಗೆ ಬೆವರು ಸುರಿಸಿ ದುಡಿಯವಂತ ಕಸುಬುಗಳನ್ನು ಸೃಷ್ಟಿಸಿ ಅವರನ್ನು ಸೇವಕರನ್ನಾಗಿ ಮತ್ತು ಗುಲಾಮರನ್ನಾಗಿ ಮಾಡಿಕೊಂಡಿದ್ದರು. ಇದನ್ನು ಮೊದಲು ಅರಿತ ಬ್ರಿಟಿಷರು ತಮ್ಮ

ಕೆಲಸಗಳು ಸುಗಮವಾಗಿ ನಡೆಯಬೇಕಾದರೆ ವಿದ್ಯಾವಂತ ದುಡಿಮೆಗಾರರು ಹಾಗೂ ಕಾರ್ಖಾನರ (ಸಹಾಯಕರು) ಅಗತ್ಯವಿತ್ತು. ಭಾರತದಲ್ಲಿ ದುಡಿಮೆ ಅಂದರೆ ಏನು? ಯಾವುದನ್ನು ದುಡಿಮೆಯೆಂದು ಕರೆಯಲಾಗಿದೆ ಹಾಗೂ ದುಡಿಮೆಯನ್ನು ಹೇಗೆ ನಿರ್ವಚಿಸಿ ಲೆಕ್ಕಾಚಾರ ಮಾಡಿ ದಾಖಲಿಸಿದೆ ಎಂಬ ಸಂಗತಿಗಳನ್ನು ಇಲ್ಲಿ ಗಮನಿಸಬಹುದು.

'ದಿ ನ್ಯಾಷನಲ್ ಸ್ಯಾಂಪಲ್ ಸರ್ವೆ' ಈ ಸರ್ವೆಯೂ ದುಡಿಮೆ ಅನ್ನುವುದನ್ನು ಎರಡು ಭಾಗ ಮಾಡಿಕೊಂಡಿದೆ. ಒಂದು ಗ್ರಾಮೀಣ ಪ್ರದೇಶ ಇನ್ನೊಂದು ನಗರ ಪ್ರದೇಶ. ಇದು ಒಂದು ದುಡಿಮೆ ಅಥವಾ ಉದ್ಯೋಗದ ಮಟ್ಟವನ್ನು ತಿಳಿಸುವ ಸಂಸ್ಥೆಯಾಗಿದೆ. ಈ ಸಂಸ್ಥೆಯು ದುಡಿಮೆಯನ್ನು ಆದಾಯ ಗಳಿಸುವ ಚಟುವಟಿಕೆ ಎಂದು ಗುರುತಿಸಿದೆ. ಯಾವ ಕೆಲಸ ಕಾರ್ಯವು ತನ್ನ ಕುಟುಂಬದ ಜೀವನಕ್ಕಾಗಿ ಕುಟುಂಬದ ಲಾಭಕ್ಕಾಗಿ ಹಣ ಸಂಪಾದಿಸಲು ಸಹಕಾರಿಯಾಗಿದೆಯೋ ಮತ್ತು ಯಾವ ಕಾರ್ಯಚಟುವಟಿಕೆಯು ರಾಷ್ಟ್ರೀಯ ಉತ್ಪನ್ನಕ್ಕೆ ಕೊಡುಗೆಯನ್ನು ನೀಡುತ್ತದೆಯೋ ಅದನ್ನು ದುಡಿಮೆಯೆಂದು ಗುರುತಿಸಿದೆ. ಹಣದ ವ್ಯವಹಾರ ಮತ್ತು ವಿನಿಮಯಕ್ಕೆ ಒಳಪಡುವ ಕೆಲಸ ಅಥವಾ ಕಾರ್ಯವನ್ನು ಆರ್ಥಿಕ ಚಟುವಟಿಕೆ ಎಂದು ಕರೆದರೂ ಸಹ ಕೃಷಿಕ್ಷೇತ್ರದಲ್ಲಿನ ಕೆಲಸದಿಂದ ಮಾರುಕಟ್ಟೆಗೆ ಹೋಗುವಂತಹ ಚಟುವಟಿಕೆಯನ್ನು ದುಡಿಮೆಯೆಂದು ಪರಿಗಣಿಸಿದೆ. ಭಾರತ ಸರ್ಕಾರವು ಸಹ ಜನಗಣತಿಯ ಸಮೀಕ್ಷೆಯನ್ನು ಮಾಡಿಸಿದೆ. ಮೊದಲ ಬಾರಿಗೆ ಅಂದರೆ ೧೯೫೧ರಲ್ಲಿ ಜನಗಣತಿಯ ವರದಿಯನ್ನು ಸಿದ್ಧಪಡಿಸಿದೆ. ಈ ಜನಗಣತಿಯು ದುಡಿಮೆಯನ್ನು ಆರ್ಥಿಕ ಚಟುವಟಿಕೆಗಳೇ ಮಾತ್ರ ದುಡಿಮೆ ಎಂದು ಗುರುತಿಸಿದೆ. ಇದು ಸ್ವಂತ ಅನುಭೋಗಕ್ಕಾಗಿ ಮಾಡುವ ದುಡಿಮೆಯನ್ನು ಆರ್ಥಿಕ ಚಟುವಟಿಕೆ ಎಂದು ಸ್ವೀಕರಿಸುವುದಿಲ್ಲ. ಅಂದರೆ ಮಾರುಕಟ್ಟೆಗೆ ಹೋಗುವ ವಸ್ತುಗಳನ್ನು ಉತ್ಪಾದಿಸುವ ಕೆಲಸವನ್ನು ಮಾತ್ರ ದುಡಿಮೆಯೆಂದು ಪರಿಗಣಿಸಲಾಗಿದೆ. ೧೯೬೧ರಲ್ಲಿ ಮತ್ತೆ ಜನಗಣತಿಯು ನಡೆದಿದೆ. ಈ ಜನಗಣತಿಯಲ್ಲಿ ದುಡಿಮೆಯ ಪರಿಕಲ್ಪನೆಯನ್ನು ಸ್ವಲ್ಪ ಸಡಿಲಿಸಿದೆ. ಯಾವುದೇ ಆರ್ಥಿಕ ಉತ್ಪಾದನಾ ಚಟುವಟಿಕೆಯಲ್ಲಿ ಭಾಗವಹಿಸುವುದು. ಈ ಭಾಗವಹಿಸುವಿಕೆಯು ಭೌತಿಕವಾಗಿರಬಹುದು ಅಥವಾ ಮಾನಸಿಕವಾಗಿರಬಹುದು. ದುಡಿಮೆ ಅಂದರೆ ನೇರವಾಗಿ ದೈಹಿಕ ಶ್ರಮದ ಕೆಲಸವಷ್ಟೇ ಅಲ್ಲ ಅದರ ನಿರ್ವಹಣೆ ಮತ್ತು ನಿರ್ದೇಶನ ನೀಡುವುದನ್ನು ಕೂಡ ಸೇರಿಸಲಾಯಿತು. ಇದರಲ್ಲಿ ಕೃಷಿ ಮತ್ತು ಗೃಹ ಉದ್ಯಮದಲ್ಲಿರುವವರ ವೇತನರಹಿತ ಕೆಲಸಗಳು ಸೇರಿಸಿಕೊಳ್ಳಲಾಯಿತು. ಈ ಮೇಲಿನ ಸಮೀಕ್ಷೆಗಳು ಆದಾಯ ಬರುವ ಉತ್ಪನ್ನಗಳನ್ನು ಉತ್ಪಾದಿಸಿದರೆ ಮಾತ್ರ ಅದನ್ನು ದುಡಿಮೆ ಎಂಬ ತೀರ್ಮಾನಕ್ಕೆ ಬಂದವು. ಆದರೆ ಮನೆಯೊಳಗಡೆ ಈ ದೈಹಿಕ ಶ್ರಮಕ್ಕೆ ಶಕ್ತಿ ತುಂಬುವಂತಹ ಕೆಲಸದಲ್ಲಿ ತೊಡಗಿರುವ ಮಹಿಳೆಯರ ಶ್ರಮದ ಬಗ್ಗೆ ಎಲ್ಲೂ ಮಾತನಾಡಿಲ್ಲ ಹಾಗೂ ಚರ್ಚೆಯನ್ನು ಸಹ ಎತ್ತಿಲ್ಲ. ತಾಯಿಯ ಶ್ರಮದ ತ್ಯಾಗವಿಲ್ಲದಿದ್ದರೆ ದೈಹಿಕವಾಗಿ ಬೆಳೆಯಲು ಮನುಷ್ಯನಿಗೆ ಸಾಧ್ಯವಿಲ್ಲ. ಅಂದರೆ ಮಹಿಳೆಯರು ಮಾಡುವ ದುಡಿಮೆಯನ್ನು ಸಂಪೂರ್ಣವಾಗಿ ನಿರಾಕರಿಸಲಾಗಿದೆ. ದುಡಿಮೆಯ ಆರ್ಥಿಕ ಆದಾಯದ ಒಳಗಡೆ ಮಹಿಳೆಯನ್ನು ಬಿಟ್ಟುಕೊಳ್ಳದಿರುವುದು ಅಭಿವೃದ್ಧಿಗೆ ದೊಡ್ಡ ಹಿನ್ನಡೆಯಾದಂತೆ.

ಡಾ. ಬಿ. ಆರ್. ಅಂಬೇಡ್ಕರ್ ಅವರು ಮಹಿಳೆಯರನ್ನು ಕುರಿತು ಹೀಗೆ ಹೇಳುತ್ತಾರೆ, "Women is Double Untouchable" ಎಂದು ತೋರಿಸಿಕೊಟ್ಟ ಮತ್ತು ಭಾರತದಲ್ಲಿ ಹೇಗೆ ಅಸ್ಪೃಶ್ಯತೆಯಿಂದ ದುಡಿಮೆಯನ್ನು ನಿರಾಕರಿಸಲಾಗುತ್ತಿದೆ ಎಂಬ ಮಹತ್ವದ ಸಂಗತಿಯನ್ನು ಇಡೀ ಜಗತ್ತಿಗೆ ವಿವರಿಸಿದ್ದಾರೆ. ಅಂದರೆ ಅಸ್ಪೃಶ್ಯರು ಹೇಗೆ ಶೋಷಣೆಗೆ ಒಳಗಾಗಿದ್ದಾರೆ ಅದಕ್ಕಿಂತ ದುಪ್ಪಟ್ಟು ಮಹಿಳೆಯರು ಶೋಷಣೆಗೆ ಒಳಪಡುತ್ತಿರುವುದರ ಕುರಿತು ಮಾತನಾಡಿದ ಮತ್ತು ಮಹಿಳೆಯರಿಗೆ 'ಹಿಂದು ಕೋಡ್ ಬಿಲ್' ಜಾರಿಗೆ ಒಪ್ಪದಿದ್ದ ಸಂಸತ್ತಿನ ಮಹಿಳಾ ವಿರೋಧಿ ನಡೆಯನ್ನು ಕಂಡು ಅಂಬೇಡ್ಕರ್ ಅವರು ತಮ್ಮ ಮಂತ್ರಿಗಿರಿಗೆ ರಾಜೀನಾಮೆಯನ್ನು ನೀಡುತ್ತಾರೆ. ಡಾ. ಬಾಬಾ ಸಾಹೇಬ್ ಅಂಬೇಡ್ಕರ್ ಅವರು ಇಡೀ ಶೋಷಣೆಗೆ ಒಳಪಟ್ಟ ಸಮುದಾಯ ಮತ್ತು ಮಹಿಳೆಯರಿಗೆ ಈ ದೇಶದಲ್ಲಿ ಜಾತಿ ಧರ್ಮ ಲಿಂಗ ಅಸಮಾನತೆ ಮೇಲು ಕೀಳುಗಳು ಎಲ್ಲಿಯವರೆಗೆ ಇರುತ್ತೋ ಅಲ್ಲಿಯ ತನಕ ಈ ದೇಶ ಉದ್ದಾರ ಆಗೋದಿಲ್ಲ ಎಂಬ ಸತ್ಯವನ್ನು ಮನಗಂಡಿದ್ದರು. ಅಂದಿನಿಂದ ಇಂದಿನವರೆಗೂ ಮನುವಾದಿ ಪಟ್ಟಭದ್ರ ಹಿತಾಸಕ್ತಿಗಳು ಇನ್ನೂ ಕೂಡ ಅಸ್ಪೃಶ್ಯತೆ ಮತ್ತು ಮಹಿಳೆಯನ್ನು ಕನಿಷ್ಠವಾಗಿ ನೋಡುವುದನ್ನು ಬಿಟ್ಟಿಲ್ಲ. ಬಿಡಬೇಕಾದರೆ ದೇಶದೊಳಗೆ ದೊಡ್ಡಮಟ್ಟದ ಸಮಾನತೆಯ ಸ್ವಾತಂತ್ರ್ಯ ಸಂಗ್ರಾಮ ಶುರುವಾಗಬೇಕು. ಆದರೆ ಅದು ಅಷ್ಟು ಸುಲಭವಾಗಿ ಘಟಿಸುವಂತದ್ದಲ್ಲ. ಇಂಥ ಸಂದಿಗ್ಧತೆಯ ಒಳಗೆ ಮಹಿಳೆಯರ ದುಡಿಮೆಯ ಪರಿಕಲ್ಪನೆಯನ್ನು ಯಾರು ಕೂಡ ನಿಖರವಾಗಿ ಕಟ್ಟಿಕೊಟ್ಟಿಲ್ಲ. ಕೇವಲ ಮಹಿಳೆಯರ ಸಬಲೀಕರಣ, ಲಿಂಗಸಮಾನತೆ, ಶಿಕ್ಷಣ, ಆರೋಗ್ಯದ ಬಗ್ಗೆ ಸಾಕಷ್ಟು ಚರ್ಚೆಗಳು ನಡೆದಿವೆ. ಆದರೆ ಸೈದ್ಧಾಂತಿಕ ಚೌಕಟ್ಟಿನೊಳಗೆ ಮಹಿಳೆಯರ ದುಡಿಮೆಗೆ ಸಂಬಂಧಿಸಿದಂತೆ ಚರ್ಚಿಸಿರುವುದು ಬಹಳ ಕಡಿಮೆ. ನೋಬೆಲ್ ಪ್ರಶಸ್ತಿ ಪುರಸ್ಕೃತರಾದ ಅಮರ್ತ್ಯಸೇನ್ ಮತ್ತು ಮೈಬೂಬ್ ಉಲ್– ಹಕ್ ಅವರು ಮಾನವ ಅಭಿವೃದ್ಧಿ ಮಾಪನದ ಪ್ರಣಾಳಿಕೆಯ ಒಳಗಡೆ ಮಹಿಳೆಯರಿಗೆ, ಮಕ್ಕಳಿಗೆ ಅಭಿವೃದ್ಧಿಯೊಳಗೆ ಸ್ಥಾನವನ್ನು ಕಲ್ಪಿಸಿದ ಕೀರ್ತಿ ಈ ಮಹನೀಯರಿಗೆ ಸಲ್ಲುತ್ತದೆ. ಕರ್ನಾಟಕದಲ್ಲಿಯೂ ಸಹ ಮಹಿಳೆಯರ ಹಕ್ಕುಗಳ ಬಗ್ಗೆ, ಮಹಿಳೆಯರ ದುಡಿಮೆಯ ಬಗ್ಗೆ, ಮಕ್ಕಳ ಮಹಿಳೆಯರ ಅಪೌಷ್ಟಿಕತೆ ಮತ್ತು ದಲಿತರ ಅಭಿವೃದ್ಧಿಯ ಬಗ್ಗೆ ನಿರಂತರವಾದ ಚರ್ಚೆಯನ್ನು ಟಿ. ಆರ್. ಚಂದ್ರಶೇಖರ ಹಾಗೂ ಎಂ. ಚಂದ್ರ ಪೂಜಾರಿ ಅವರು ಚರ್ಚೆ ಮಾಡುತ್ತಾ ಬಂದಿದ್ದಾರೆ ಮತ್ತು ಮಾಡುತ್ತಲಿದ್ದಾರೆ.

**ಭಾರತ ಮತ್ತು ಕರ್ನಾಟಕದಲ್ಲಿ ಭೂರಹಿತ ಕೃಷಿ ದುಡಿಮೆಗಾರರ ದುಡಿಮೆಯ ಸ್ವರೂಪಗಳು**

ಭಾರತಕ್ಕೆ ಸ್ವಾತಂತ್ರ್ಯ ಸಿಗುವ ಪೂರ್ವದಲ್ಲಿ ಮತ್ತು ಬ್ರಿಟಿಷರು ಭಾರತವನ್ನು ಬಿಟ್ಟು ಹೋಗುವವರೆಗೂ ಭಾರತದಲ್ಲಿ ಆಧುನಿಕಯುಗ ಪ್ರಾರಂಭದವರೆಗೂ ಹಾಗೂ ನವತಂತ್ರಜ್ಞಾನ ಬೆಳಕಿಗೆ ಬಂದಿರದ ಸಂದರ್ಭದಲ್ಲಿ ಭೂರಹಿತ ಕೃಷಿ ದುಡಿಮೆಗಾರರು ಎಂತೆಂತಹ ಪರಿಸ್ಥಿತಿಯಲ್ಲಿ ದುಡಿಮೆಯನ್ನು ಮಾಡುತ್ತಿದ್ದರು ಎಂಬ ಸಂಗತಿಗಳನ್ನು ಕುರಿತು ಇಲ್ಲಿ ಚರ್ಚೆ ಮಾಡಲಾಗಿದೆ. ೧೯ನೇ ಶತಮಾನ ಆರಂಭವಾಗಿ ಪ್ರಸ್ತುತ ಜನರ ಜೀವನಾಧಾರಿತ  ಮೂಲ ಕಸುಬಾಗಿ ಭೂಮಿಯನ್ನು ಅವಲಂಬಿಸಿದ್ದರು. ಭೂಮಿ ಇಲ್ಲದೆ ಭೂಮಾಲೀಕರ ಹೊಲಗದ್ದೆಗಳಲ್ಲಿ ಕೂಲಿಗಳಾಗಿ ದುಡಿಯುವುದನ್ನು ರೂಢಿ ಮಾಡಿಕೊಂಡಿದ್ದರು.  ಅವರ ಕೊಡುವ ಕಾಳುಕಡಿಗಳನ್ನು ತಮ್ಮ ಜೀವನಕ್ಕಾಗಿ ಅಷ್ಟನ್ನು ಮಾತ್ರ

ಉಪಯೋಗಿಸುತ್ತಿದ್ದರು. ಇಂತಹ ಸಂದರ್ಭದಲ್ಲಿ ಭೂಮಾಲೀಕರ ದೌರ್ಜನ್ಯಗಳು, ದಬ್ಬಾಳಿಕೆಗಳು, ಶೋಷಣೆಗಳು ದುಡಿಯುವ ದುಡಿಮೆಗಾರರ ಮೇಲೆ ಅದರಲ್ಲಿ ಮಹಿಳೆಯರೆನ್ನದೆ ನಿರಂತರವಾದ ನಿಕೃಷ್ಟವಾದ ದಬ್ಬಾಳಿಕೆಗಳು ನಡೆಯುತ್ತಿದ್ದವು. 'ಕೈ ಕೆಸರಾದರೆ ಬಾಯಿ ಮೊಸರು' ಎನ್ನುವ ಮಾತು ಭೂಮಾಲೀಕರಿಗೆ ಅನ್ವಯವಾಗುತ್ತಿರಲಿಲ್ಲ. ಏಕೆಂದರೆ ಯಾವ ಭೂಮಾಲೀಕರು ತಮ್ಮ ಸ್ವಂತ ಜಮೀನಿನಲ್ಲಿ ದುಡಿಮೆಯನ್ನು ಮಾಡುತ್ತಿರಲಿಲ್ಲ. ಬದಲಾಗಿ ಭೂಮಿ ಇಲ್ಲದ ಕೃಷಿ ದುಡಿಮೆಗಾರರು ತಮ್ಮ ಬೆವರುಗಳನ್ನು ಸುರಿಸಿ ಹಗಲು ರಾತ್ರಿ ಎನ್ನದೆ ದುಡಿಮೆಯನ್ನು ಮಾಡುತ್ತಿದ್ದರು. ಆದರೆ ಅದರ ಫಲವೆನ್ನೆಲ್ಲಾ ಭೂಮಾಲೀಕರೊಬ್ಬರೇ ಧಕ್ಕಿಸಿಕೊಳ್ಳುತ್ತಿದ್ದರು. ಇದು ಕೇವಲ ಭೂಮಿಗೆ ಮಾತ್ರ ಅನ್ವಯಿಸುವುದಿಲ್ಲ, ಎಲ್ಲ ಉತ್ಪಾದನಾಂಗದ ಮೂಲಗಳಿಗೆ ಇವರ ಬೆವರೇ ಆಧಾರ. ಕೃಷಿಯಲ್ಲಿ ಕೆಲಸವಿಲ್ಲದೆ ಇದ್ದಾಗ ಬೇರೆ ಉತ್ಪದನಾಂಗಕ್ಕೆ ಇವರ ಶ್ರಮ ಅಧಿಕ ಅನ್ನುವುದನ್ನು ಮರೆಯುವಂತಿಲ್ಲ. ಅಂದರೆ ಬೇರೆಯವರ ಹೊಟ್ಟೆ ತುಂಬಲು ಇನ್ನೊಬ್ಬರ ಕೈಗಳು ದುಡಿಮೆ ಮಾಡುವುದನ್ನು ನಾವು ಕಾಣಬಹುದಾಗಿದೆ. ಅಂದ್ರೆ ಭೂಮಿ ಇಲ್ಲದೆ ಭೂಮಿಯನ್ನು ನಂಬಿಕೊಂಡು ಜೀವಕ್ಕೆ ಎಷ್ಟು ಒತ್ತಡಗಳು ಎದುರಾದರೂ ಭೂಮಾಲೀಕರ ಮತ್ತು ಭೂಮಿಯುಳ್ಳವರ ಹೊಲದಲ್ಲಿ ದುಡಿದು ತಮ್ಮ ರಕ್ತವನ್ನು ಹರಿಸಿ ಫಸಲನ್ನು ಭೂಮಿಯ ಒಡೆಯನಿಗೆ ನೀಡುವ ಶ್ರಮದ ಹಿಂದೆ ಅವರ ಹಸುವಿನ ಕೂಗು ಇದೆ ಅನ್ನುವುದನ್ನು ಯಾವ ಶ್ರೀಮಂತ ಮಾಲೀಕನಿಗೆ ಕಾಣಿಸುವುದಿಲ್ಲ. ಸಹಸ್ರಾರು ಶತಮಾನಗಳು ಕಳೆದರೂ ಮತ್ತು ಇಂದಿನ ನವಯುಗ ತಂತ್ರಜ್ಞಾನ ಮುಂದುವರಿದರು ದುಡಿಯುವ ವರ್ಗದ ಮತ್ತು ವಲಸೆ ಅನ್ನುವಂಥದ್ದು ನಿರಂತರವಾಗಿ ಪಲ್ಲಟವಾಗುತ್ತಾ ನಡೆಯುತ್ತಿದೆ. ಯಾವುದೇ ವ್ಯಕ್ತಿಯು ಉನ್ನತ ಮಟ್ಟದ ಜೀವನ ನಡೆಸುತ್ತಿದ್ದಾನೆಂದರೆ ಅವನ ಆ ಶ್ರೀಮಂತಿಗೆ ಪೂರಕವಾಗಿ ಇನ್ನೊಬ್ಬರ ಬೆವರಿನ ಹನಿಗಳು ಕಾರಣವಾಗಿರುತ್ತವೆ ಅನ್ನುವುದನ್ನು ಸಮಾಜವು ಅರ್ಥಮಾಡಿಕೊಳ್ಳಬೇಕಾಗಿದೆ. ಪ್ರಸ್ತುತ ಭಾರತ ಮತ್ತು ಕರ್ನಾಟಕದಲ್ಲಿ ಎಲ್ಲಾ ವರ್ಗಗಳಿಗೆ ದುಡಿಮೆಗಾರರ ಶ್ರಮದ ಮೂಲಕವೇ ಅವರ ಹೊಟ್ಟೆಗೆ ಅನ್ನ ಬೀಳುತ್ತಿರುವುದು ದುಡಿಮೆಗಾರರ ಶ್ರಮದ ದುಡಿಮೆಯೇ ಕಾರಣವಾಗಿದೆ. ಆದ್ದರಿಂದ ಭೂರಹಿತ ಕೃಷಿ ದುಡಿಮೆಗಾರರ ಪರಿಶ್ರಮವನ್ನು ಮತ್ತು ಅವರು ವಲಸೆಯ ಸಂದರ್ಭದಲ್ಲಿ ಅನುಭವಿಸುವ ಸಂಕಷ್ಟಗಳು ಯಾವ ಭೂಮಾಲೀಕ ವರ್ಗಕ್ಕೂ ಮತ್ತು ಶ್ರೀಮಂತಿಕೆಗೆ ಅರ್ಥವಾಗುವುದಿಲ್ಲ.

**ಭೂಮಿಯ ಒಡೆತನ**

ಇಡೀ ಜಗತ್ತಿನಾದ್ಯಂತ ಉತ್ಪಾದನೆಯನ್ನು ಮಾಡಲು ಬಹಳ ಮುಖ್ಯವಾಗಿ ನಾಲ್ಕು ಘಟಕಗಳನ್ನು ಆರ್ಥಿಕ ಪ್ರಗತಿಯಲ್ಲಿ ಗುರುತಿಸಿಕೊಂಡು ಬರಲಾಗಿದೆ. ಆ ಘಟಕಗಳೆಂದರೆ ಭೂಮಿ, ಶ್ರಮ, ಬಂಡವಾಳ, ಸಂಘಟನೆ ಇವುಗಳು ಒಂದು ದೇಶದ ಉತ್ಪಾದನೆಯಲ್ಲಿ ಪ್ರಮುಖವಾದಂತಹ ಪಾತ್ರವನ್ನು ನಿರ್ವಹಿಸುತ್ತವೆ ಎಂದು ಆರ್ಥಿಕ ತಜ್ಞರ ಅಭಿಮತವಾಗಿದೆ. ಈ ತಜ್ಞರು ಗುರುತಿಸಿದ ಈ ಉತ್ಪಾದನಾಂಗಗಳು ಯಾರ ಹಿಡಿತದಲ್ಲಿ ಕಾರ್ಯನಿರ್ವಹಿಸುತ್ತವೆ ಎನ್ನುವುದು ಚರ್ಚಿಸಬೇಕಾದ ಸಂಗತಿಯಾಗಿದೆ. ಈ ನಾಲ್ಕು ಉತ್ಪಾದನಾಂಗ ಘಟಕಗಳಿಗೆ ಪ್ರತಿಫಲವಾಗಿ ಗೇಣಿ ,ಕೂಲಿ, ಬಡ್ಡಿ ಮತ್ತು ಲಾಭದ ಪ್ರಕ್ರಿಯೆಯನ್ನು ಒಳಗೊಂಡಿದೆ. ಅಂದರೆ ಭೂಮಿ ಮತ್ತು ಬಂಡವಾಳವನ್ನು ಉಳ್ಳವರು ಹೊಂದಿರುತ್ತಾರೆ ಹಾಗೂ ಅದರ

ಸಂಘಟನೆಯನ್ನು ಕೂಡ ಅವರೇ ನಿರ್ವಹಿಸುತ್ತಾರೆ. ಇಲ್ಲಿ ಶ್ರಮ ಅನ್ನುವಂಥದ್ದು ಕೇವಲ ಇಲ್ಲದವರ ಆಸ್ತಿಯಾಗಿ ಕಾರ್ಯನಿರ್ವಹಿಸುತ್ತದೆ. ಭೂಮಿಯ ಒಡೆತನವು ಭೂ ಮಾಲೀಕರ ಮತ್ತು ಶ್ರೀಮಂತರ ಹಾಗೂ ಮೇಲ್ವರ್ಗದವರ ಹಿಡಿತದಲ್ಲಿದೆ. ಭಾರತದ ಸ್ವಾತಂತ್ರ್ಯ ಪೂರ್ವದಲ್ಲಿ ಭೂಮಿಯು ಜಾತಿ ವ್ಯವಸ್ಥೆಯ ಆಧಾರಿತವಾಗಿ ನೋಡಿದರೇ ಅಲ್ಲೂ ಕೂಡ ಮೇಲ್ವರ್ಗದವರ ಹಿಡಿತದಲ್ಲಿ ಇರುವುದನ್ನು ಗಮನಿಸಬಹುದು. ಭಾರತವು ಚಾತುರ್ವರ್ಣ ಪದ್ಧತಿಯನ್ನು ಅನುಸರಿಸಿಕೊಂಡು ಬರುತ್ತಿರುವ ದೇಶವಾಗಿದೆ. ಅದರಲ್ಲಿ ಬ್ರಾಹ್ಮಣ, ಕ್ಷತ್ರಿಯ, ವೈಶ್ಯ, ಶೂದ್ರ ಹೀಗೆ ಪಿರಾಮಿಡ್ ಶ್ರೇಣಿಯಲ್ಲಿ ಇರುವುದನ್ನು ಗಮನಿಸಿದರೆ, ದುಡಿಯುವ ಮತ್ತು ತಮ್ಮ ಶಕ್ತಿಯನ್ನೇ ಶ್ರಮದ ರೂಪದಲ್ಲಿ ಧಾರೆ ಎರೆಯುವುದನ್ನು ಅತ್ಯಂತ ಕೆಳ ವರ್ಗವು ಮಾಡಿಕೊಂಡು ಬರುತ್ತಿದೆ. ಭಾರತಕ್ಕೆ ಬ್ರಿಟಿಷರು ಬರುವುದಕ್ಕಿಂತ ಪೂರ್ವದಲ್ಲಿ ಕೆಳ ವರ್ಗದ ಜನರಿಗೆ ಮತ್ತು ಅಸ್ಪೃಶ್ಯರಿಗೆ ಹಾಗೂ ಮಹಿಳೆಯರಿಗೆ ಯಾವುದೇ ರೀತಿಯ ಶಿಕ್ಷಣವನ್ನು ನೀಡುತ್ತಿರಲಿಲ್ಲ. ಏಕೆಂದರೆ ಇವರಿಗೆ ಶಿಕ್ಷಣವನ್ನು ನೀಡಿದರೆ ಬುದ್ಧಿವಂತರಾಗಿ ಇನ್ನೊಬ್ಬರ ಗುಲಾಮಗಿರಿಯ ಹಂಗಿನಲ್ಲಿ ಬದುಕುವುದನ್ನು ತೊರೆಯುತ್ತಾರೆಂಬುದು ಮೇಲ್ವರ್ಗದ ಲೆಕ್ಕಾಚಾರವಾಗಿತ್ತು. ಬ್ರಿಟಿಷರು ಬಂದ ನಂತರ ಇಲ್ಲಿನ ಜನಸಾಮಾನ್ಯರಿಗೂ ಸಹ ಶಿಕ್ಷಣದ ವ್ಯವಸ್ಥೆಯನ್ನು ಕಲ್ಪಿಸಿದರು.  ಈ ಚರ್ಚೆಯು ಬಹಳ ವಿಸ್ತೃತವಾದದ್ದು. ಇಲ್ಲಿ ನಮಗೆ ಬಹಳ ಮುಖ್ಯವಾಗಿ ಭೂಮಿಯ ಒಡೆತನವು ಅತ್ಯಂತ ಕೆಳ ವರ್ಗದ ಮತ್ತು ಜಾತಿಯಿಂದ ತಾರತಮ್ಯಕ್ಕೆ ಒಳಗಾದ ಜನರು ಭೂಮಿಯ ಒಡೆತನವನ್ನು ಹೊಂದಿಲ್ಲದಿರುವುದು ಕಂಡುಬರುತ್ತದೆ. ಭಾರತ ಮತ್ತು ಕರ್ನಾಟಕದಲ್ಲಿ ಶೇಕಡಾ ೮೦ರಷ್ಟು ಭೂಮಿಯನ್ನು ಮೇಲ್ವರ್ಗದವರ ಹಿಡಿತದಲ್ಲಿದೆ. ಇನ್ನೂಳಿದ ಭೂಮಿಯಲ್ಲಿ ಹಿಂದುಳಿದ ವರ್ಗಗಳಾದ ಒಬಿಸಿಯವರ ಒಡೆತನದಲ್ಲಿ ಶೇಕಡ ೧೫ರಷ್ಟು ಇದ್ದರೆ, ಕೇವಲ ೫% ರಷ್ಟು ಭೂಮಿಯು ಕೆಳ ವರ್ಗದವರ ಕೈಯಲ್ಲಿದೆ. ಈ ಅಸಮಾನವಾದ ಭೂಮಿಯ ಹಂಚಿಕೆಯಿಂದ ಭೂಮಿ ಇಲ್ಲದವರು ಎಂಬ ವರ್ಗಗಳು ಸೃಷ್ಟಿಯಾಗಿದೆ. ಇಲ್ಲಿ ವರ್ಗಗಳೆಂದರೆ ಯಾವುದೇ ಜಾತಿ ವ್ಯವಸ್ಥೆಯನ್ನು ಪರಿಗಣಿಸದೆ ಎಲ್ಲರನ್ನು ಒಳಗೊಂಡಿದೆ. ಆದರೆ ಭಾರತದ ಸಂದರ್ಭದಲ್ಲಿ ಭೂಮಿ ಅನ್ನುವಂತದ್ದು ಎಲ್ಲಾ ವರ್ಗಗಳನ್ನು ಏಕಕಾಲದಲ್ಲಿ ಪ್ರತಿನಿಧಿಸಿರುವುದಿಲ್ಲ. ಅದರಲ್ಲೂ ಮಹಿಳೆಯರನ್ನು ಭೂಮಿಯ ಒಡತನದಿಂದ ಬಹುದೂರ ಇರಿಸಲಾಗಿದೆ. ದುರಂತವೆಂದರೆ ಭೂಮಿಯನ್ನು ಅಧಿಕ ಪ್ರಮಾಣದಲ್ಲಿ ಉಳುಮೆ ಮಾಡುತ್ತಿರುವವರು ಮತ್ತು ಅದರ ಫಸಲನ್ನು ತೆಗೆಯುವವರು ಮಹಿಳೆಯರಾಗಿದ್ದಾರೆ ಹೊರತು ಅದರ ಫಲವನ್ನು ಇಡೀ ಪುರುಷಶಾಹಿ ವ್ಯವಸ್ಥೆಯು ತನ್ನದೆಂಬಂತೆ ದಕ್ಕಿಸಿಕೊಂಡಿದೆ ಮತ್ತು ದಕ್ಕಿಸಿಕೊಳ್ಳುತ್ತಾ ಇದೆ. ಭೂಮಿಯ ಒಡೆತನವು ಭಾರತ ಮತ್ತು ಕರ್ನಾಟಕದಲ್ಲಿ ಅಸಮಾನತೆಯಿಂದ ಕೂಡಿದ್ದು ಅದು ಉಳ್ಳವರು ಹೆಚ್ಚಿನ ಪ್ರಮಾಣದಲ್ಲಿ ಅಂದರೆ ಶೇಕಡ ೮೦ರಷ್ಟು ಭೂಮಿಯ ಒಡೆತನವನ್ನು ಹೊಂದಿದ್ದಾರೆ.

**ದುಡಿಮೆ ಅಥವಾ ಶ್ರಮ**

ದುಡಿಮೆ ಅಥವಾ ಶ್ರಮವು ಒಂದು ಜೀವವಿರುವ ಮತ್ತು ಕ್ರಿಯೆಯನ್ನು ಒಳಗೊಂಡಿರುವ ಅತ್ಯಂತ ಮಹತ್ವದ ಕ್ರಿಯಾಶೀಲ ಉತ್ಪಾದನಾಂಗವಾಗಿದೆ. ಅಂದರೆ ಶ್ರಮದ ನೆರವಿಲ್ಲದೆ ಯಾವುದನ್ನು ಮತ್ತು ಏನನ್ನು ಉತ್ಪಾದಿಸಲು ಸಾಧ್ಯವಾಗದಿರುವ ನಿರಂತರ ಕ್ರಿಯೆಯ ಸಂಗತಿಯಾಗಿದೆ. ಅದು ಉತ್ಪನ್ನವನ್ನು ಉತ್ಪಾದಿಸುವ

ಅಥವಾ ಸರಕು ಸೇವೆಗಳನ್ನು ನಿರ್ವಹಿಸುವ ಒಂದು ದೊಡ್ಡ ಸಾಧನ ಮತ್ತು ಗುರಿಯನ್ನು ಮುಟ್ಟುವ ಪ್ರಕ್ರಿಯೆಯಾಗಿದೆ. ಸಾಮಾನ್ಯವಾಗಿ ಶ್ರಮ ಅಥವಾ ದುಡಿಮೆ ಅನ್ನುವುದನ್ನು ತಮ್ಮ ಶಕ್ತಿ ಸಾಮರ್ಥ್ಯವನ್ನು ಬಳಸಿ ಯಾವುದೇ ದೈಹಿಕ ಅಥವಾ ಮಾನಸಿಕ ಕೆಲಸವನ್ನು ಒಳಗೊಂಡಿರುತ್ತದೆ. ಭಾರತದ ಆರ್ಥಿಕ ವ್ಯವಸ್ಥೆಯಲ್ಲಿ ಮತ್ತು ಆರ್ಥಿಕತಜ್ಞರು ಅಭಿಪ್ರಾಯದಲ್ಲಿ ಶ್ರಮ ಅನ್ನುವುದು ಆದಾಯವನ್ನು ಗಳಿಸುವ ಉದ್ದೇಶದಿಂದ ಒಬ್ಬ ವ್ಯಕ್ತಿಯು ಮಾಡುವ ಕಾರ್ಯ ದೈಹಿಕ ಅಥವಾ ಮಾನಸಿಕವಾಗಿ ತೊಡಗಿಕೊಂಡಿರುವ ಕೆಲಸವಾಗಿರುತ್ತದೆ ಎಂದು ಗುರುತಿಸಿದ್ದಾರೆ. ಅಂದರೆ ಆದಾಯವನ್ನು ಗಳಿಸುವ ಉದ್ದೇಶದಿಂದ ವಿನಿಯೋಗಿಸಲಾಗುವ ಎಲ್ಲಾ ದೈಹಿಕ ಮತ್ತು ಮಾನಸಿಕ ಶಕ್ತಿಯನ್ನು ಶ್ರಮ ಎಂದು ಕರೆಯಲಾಗುತ್ತದೆ. ಆದರೆ ಆದಾಯ ರೂಪದ ಪ್ರತಿಫಲ ಪಡೆಯದೆ ಯಾವುದೇ ಉಚಿತ ಅಥವಾ ಪುಕ್ಕಟೆ ಶ್ರಮವನ್ನು ಅರ್ಥಶಾಸ್ತ್ರದಲ್ಲಿ ಶ್ರಮ ಎನಿಸಿಕೊಳ್ಳುವುದಿಲ್ಲ.

ದೇಶದ ಅಭಿವೃದ್ಧಿಯನ್ನು ನಿರ್ವಚಿಸುವಾಗ ಬಹಳಷ್ಟು ಆರ್ಥಿಕತಜ್ಞರು ರಾಷ್ಟ್ರೀಯ ವರಮಾನ ಹೆಚ್ಚಿಸಿದರೆ ಅಥವಾ ಜಿಡಿಪಿಯನ್ನು ದ್ವಿಗುಣಗೊಳಿಸಿದರೆ ದೇಶದ ಪ್ರಗತಿಯ ಹಾದಿ ಸುಲಭ ಎಂಬ ತೀರ್ಮಾನಕ್ಕೆ ಬರಲಾಗಿದೆ ಮತ್ತು ಅದೇ ಅಂತಿಮ ಎಂಬಂತೆ ನಂಬಿಸಲಾಗಿದೆ. ಅದು ಈಗಲೂ ಕೂಡ ಹಾಗೆ ಮುಂದುವರೆಯುತ್ತಿದೆ. ಈ ಶ್ರಮ ಮತ್ತು ದುಡಿಮೆ ಯಾರದ್ದು? ಅವರು ಏನಾಗಿದ್ದಾರೆ? ಹೇಗೆ ಬದುಕುತ್ತಿದ್ದಾರೆ? ಎಂಬ ಪ್ರಶ್ನೆಗಳು ಅವರು ತಮ್ಮ ಚರ್ಚೆಯ ಒಳಗಡೆ ತೆಗೆದುಕೊಂಡಿಲ್ಲ. ಭಾರತದಂತ ಅಭಿವೃದ್ಧಿಶೀಲ ದೇಶದಲ್ಲಿ ಭೂಮಿ ಮತ್ತು ಬಂಡವಾಳಗಳು ಸಂಪೂರ್ಣವಾಗಿ ಪುರುಷರ ಹಿಡಿತದಲ್ಲಿದೆ. ಮಹಿಳೆಯರಿಗೆ ಸಂಪನ್ಮೂಲಗಳ ಮಾಲೀಕತ್ವ ದೊರೆಯದಂತೆ ನೋಡಿಕೊಳ್ಳಲಾಗಿದೆ. ಇದರಿಂದ ಮಹಿಳೆಯರಿಗೆ ಸಣ್ಣಪುಟ್ಟ ವ್ಯಾಪಾರ ವ್ಯವಹಾರ ಮಾಡುವುದು ಸಾಧ್ಯವಾಗಿಲ್ಲ. ಮಹಿಳೆಯರು ಪುರುಷನಿಗೆ ಸಹಾಯಕಳಾಗಿ ಕೆಲಸ ಮಾಡುತ್ತಾ, ಆ ಕೆಲಸದಲ್ಲಿ ಪರಿಣಿತಿ ಪಡೆದರೂ ಮತ್ತು ಸ್ವತಂತ್ರಳಾಗಿ ಕಾರ್ಯನಿರ್ವಹಿಸಿದರೂ ಅದರ ಶ್ರೇಯಸ್ಸು ಪುರುಷರೇ ಪಡೆದುಕೊಳ್ಳುತ್ತಾರೆ. ಅಂದರೆ ಇದು ಮೇಲ್ವರ್ಗದ ಪುರುಷ ಪ್ರಧಾನ ಸ್ಥಿತಿಯಂತೆ ಕೆಳ ವರ್ಗದ ಪುರುಷರು ಸಹ ಅದನ್ನು ಅಳವಡಿಸಿಕೊಂಡಿದ್ದಾರೆ. ಬಹಳ ಮುಖ್ಯವಾಗಿ ಆರ್ಥಿಕ ಪ್ರಗತಿಯಲ್ಲಿ ಅಥವಾ ಅಭಿವೃದ್ಧಿಯಲ್ಲಿ ಜನಸಾಮಾನ್ಯರನ್ನು ಮತ್ತು ಮಹಿಳೆಯರನ್ನು ಅದರಲ್ಲೂ ಕೃಷಿ ದುಡಿಮೆಗಾರರನ್ನು ನಿರ್ಲಕ್ಷಿಸುತ್ತಾ ಬರಲಾಗಿದೆ. ಈಗಾಗಲೇ ಗುರುತಿಸಿರುವಂತೆ ಆರ್ಥಿಕ ಉತ್ಪಾದನಾಂಗಗಳೆಂದು ಕರಿಯಲ್ಪಡುವ ಭೂಮಿ, ಶ್ರಮ, ಬಂಡವಾಳ, ಸಂಘಟನೆ ಇವುಗಳನ್ನು ಸಂಪೂರ್ಣವಾಗಿ ಮೇಲ್ವರ್ಗದ ಪುರುಷ ಸಮಾಜವು ತಮ್ಮ ಮಾಲೀಕತ್ವದಲ್ಲಿಯೇ ಇರಿಸಿಕೊಂಡಿದ್ದಾರೆ. ಈ ಉತ್ಪಾದನಾಂಗಗಳ ಒಡೆತನವನ್ನು ಒಂದು ಪ್ರಭುತ್ವದ ನೆಲೆಯಲ್ಲಿ ಬಂಧಿಸಲಾಗಿದೆ.

ದುಡಿಮೆ ಅಥವಾ ಶ್ರಮದ ಪರಿಕಲ್ಪನೆಯ ಬಗ್ಗೆ ಕೆಲವು ಪ್ರಮುಖ ತಜ್ಞರ ವ್ಯಾಖ್ಯಾನಗಳನ್ನು ಇಲ್ಲಿ ಉಲ್ಲೇಖಿಸಲಾಗಿದೆ. ಅರ್ಥಶಾಸ್ತ್ರದಲ್ಲಿ ಅಲ್ಫ್ರೆಡ್ ಮಾರ್ಷಲ್ ಅವರು ದುಡಿಮೆ ಅಥವಾ ಶ್ರಮದ ಬಗ್ಗೆ ಈ ರೀತಿಯಾಗಿ ವ್ಯಕ್ತಪಡಿಸುತ್ತಾರೆ " ಒಂದು ಕಾರ್ಯದಿಂದ ನೇರವಾಗಿ ಪಡೆಯಲಾಗುವ ಸಂತೋಷವೂ ಅಲ್ಲದೆ ಕೆಲವು ವಸ್ತುಗಳನ್ನು ಗಳಿಸುವ ದೃಷ್ಟಿಕೋನದಿಂದ ವಿನಿಯೋಗಿಸುವ ಪೂರ್ಣ ಅಥವಾ ಅಪೂರ್ಣವಾದ ಮಾನಸಿಕ ಅಥವಾ ದೈಹಿಕ ಯತ್ನವು ಶ್ರಮವಾಗಿದೆ" ಎಂದು ಗುರುತಿಸಿದ್ದಾರೆ. ಹಾಗೇ ಪ್ರೊಫೆಸರ್ ಎಸ್. ಈ.

ಥಾಮಸ್ ಅವರು, " ಪ್ರತಿಫಲದ ನಿರೀಕ್ಷೆಯೊಂದಿಗೆ ಮಾಡಲಾಗುವ ಎಲ್ಲ ದೈಹಿಕ ಅಥವಾ ಮಾನಸಿಕವಾದ ಮಾನವ ಪ್ರಯತ್ನಗಳನ್ನು ಶ್ರಮ ಒಳಗೊಂಡಿರುತ್ತದೆ" ಎಂದು ವ್ಯಾಖ್ಯಾನಿಸಿದ್ದಾರೆ. ಅರ್ಥಶಾಸ್ತ್ರದ ಪಿತಾಮಹನಾದ ಆಡಮ್ ಸ್ಮಿತ್ ಅವರ ಅಭಿಪ್ರಾಯದಲ್ಲಿ ಯಾವುದೇ ಒಂದು ಉತ್ಪನ್ನವನ್ನು ಉತ್ಪಾದಿಸಲು ಪ್ರಯೋಗಿಸುವ ಮಾನಸಿಕ ಮತ್ತು ದೈಹಿಕ ಶಕ್ತಿಯನ್ನು ಶ್ರಮ ಎಂದು ಗುರುತಿಸಿದ್ದಾರೆ. ಅದೇ ರೀತಿ ಕಾರ್ಲ್ ಮಾರ್ಕ್ಸ್ ಅವರು, " ಮಾನವನು ತನ್ನ ಬುದ್ಧಿಶಕ್ತಿಯನ್ನು ಬಳಸಿ ಮತ್ತು ದೈಹಿಕ ಶ್ರಮವನ್ನು ನಿರ್ವಹಿಸಿ, ಪ್ರತಿಫಲವನ್ನು ಅಪೇಕ್ಷಿಸಿ ಮಾಡುವ ಎಲ್ಲ ಕಾರ್ಯಚಟುವಟಿಕೆಗಳನ್ನು ಶ್ರಮವೆಂದು ಪರಿಗಣಿಸಿದ್ದರು". ಹೀಗೆ ದುಡಿಮೆ ಅಥವಾ ಶ್ರಮದ ಬಗ್ಗೆ ಇರುವ ವ್ಯಾಖ್ಯಾನಗಳನ್ನು ಗಮನಿಸಿದರೆ ಶ್ರಮ ಅನ್ನುವಂತದ್ದು ಮಾನವನ ಶಕ್ತಿ ಸಾಮರ್ಥ್ಯವನ್ನು ಬಳಸಿಕೊಂಡು ಅದು ಮಾನಸಿಕವಾಗಿರಬಹುದು ಅಥವಾ ದೈಹಿಕವಾಗಿರಬಹುದು ಒಂದು ಪ್ರಕ್ರಿಯೆಯಿಂದ ಇನ್ನೊಂದು ಕ್ರಿಯೆ ಎಂಬ ವಸ್ತುಗಳನ್ನು ಉತ್ಪಾದಿಸುವ ಮತ್ತು ಅದನ್ನು ಬುದ್ದಿವಂತಿಕೆಯಿಂದ ಮಾರಾಟ ಮಾಡುವ ಅಥವಾ ಬಳಸಿಕೊಳ್ಳುವ ಎಲ್ಲಾ ಸರಕುಗಳನ್ನು ಉತ್ಪಾದಿಸುವ ಮನುಷ್ಯನಲ್ಲಿರುವ ಒಂದು ಅದ್ಭುತವಾದ ಕ್ರಿಯೆಯನ್ನು ಶ್ರಮವೆಂದು ಪರಿಗಣಿಸಲಾಗಿದೆ. ಹಾಗೇನೆ ಯಾವುದೇ ದೇಶದ ರಾಷ್ಟ್ರೀಯ ವರಮಾನವನ್ನು ಗುರುತಿಸುವಾಗ ಜನಸಾಮಾನ್ಯರ ಶ್ರಮವನ್ನು ಪರಿಗಣಿಸದೆ ಕೇವಲ ಆರ್ಥಿಕ ಚಟುವಟಿಕೆಗಳನ್ನು ಒಳಗೊಂಡಿರುವ ಆದಾಯವನ್ನು ವೃದ್ಧಿಸುವ ಅಂಶಗಳನ್ನು ಮಾತ್ರ ಆರ್ಥಿಕ ಪ್ರಗತಿಯಲ್ಲಿ ಲೆಕ್ಕಾಚಾರಕ್ಕೆ ಒಳಪಡಿಸಲಾಗುತ್ತದೆ. ಈ ಎಲ್ಲಾ ವ್ಯಾಖ್ಯಾನಗಳನ್ನು ಸೂಕ್ಷ್ಮವಾಗಿ ಅವಲೋಕಿಸಿದಾಗ, ನಮ್ಮ ಗಮನಕ್ಕೆ ಬರುವ ಸಂಗತಿ ಏನೆಂದರೆ ಆರ್ಥಿಕತೆಯ ಒಳಗಡೆ ಮಹಿಳೆಯರು ನಿರ್ಲಕ್ಷಕ್ಕೆ ಒಳಗಾಗಿರುವುದನ್ನು ಗಮನಿಸಬಹುದು. ಅಂದರೆ ಮನೆಯ ಒಳಗಡೆ ಕೆಲಸ ಮಾಡಿ ಮತ್ತು ಹೊರಗಡೆ ಹೋಗಿ ದುಡಿಯುವ ಅದರಲ್ಲೂ ಕೃಷಿಯ ಚಟುವಟಿಕೆಗಳಲ್ಲಿ ಭಾಗವಹಿಸುವ ಮಹಿಳೆಯರು ಯಾವುದೇ ಫಲಾಪೇಕ್ಷೆ ಇಲ್ಲದೆ ದುಡಿಮೆಯನ್ನು ಮಾಡುತ್ತಾರೆ. ಮಹಿಳೆಯರು ಪುರುಷರ ಹಿಂದೆ ನಿಂತು ಅವರ ಆದಾಯಕ್ಕೆ ಬೆನ್ನೆಲುಬಾಗಿರುತ್ತಾಳೆ. ಆದರೆ ಅವಳ ಶ್ರಮ ಯಾಕೆ ದುಡಿಮೆ ಎಂದು ಪರಿಗಣಿಸುತ್ತಿಲ್ಲ ಅನ್ನುವುದು ಪುರುಷ ಪ್ರಧಾನ ಧೋರಣೆಯ ಕರಾಳ ಮುಖವನ್ನು ಬಿಂಬಿಸುತ್ತದೆ. ಇವತ್ತಿಗೂ ಕೂಡ ಈ ದೇಶದ ಗ್ರಾಮೀಣ ಪ್ರದೇಶದ ಮಹಿಳೆಯರು ರೈತಾಪಿ ಹೆಣ್ಣು ಮಕ್ಕಳಾಗಿ ದುಡಿಮೆಯನ್ನೇ ಉಸಿರಾಗಿಸಿಕೊಂಡು ಬದುಕು ಸಾಗಿಸುತ್ತಾ ಬಂದವರಾಗಿದ್ದಾರೆ. ಹಿಂದಿನ ಮತ್ತು ಇಂದಿನ ನಮ್ಮ ತಾತ್ವಿಕ ವೈಚಾರಿಕ ನೆಲೆಗಟ್ಟನ್ನು ಶಿಷ್ಟಸಂಸ್ಕೃತಿ ರೂಪಿಸುತ್ತಾ ಬಂದಿರುವುದರಿಂದ ವಸ್ತುಸ್ಥಿತಿ ಮತ್ತು ತಾತ್ವಿಕ ನಂಬಿಕೆಗಳ ನಡುವೆ ದೊಡ್ಡಮಟ್ಟದ ಅಂತರ ಸೃಷ್ಟಿಯಾಗಿಬಿಟ್ಟಿದೆ. ಮಹಿಳೆಯರ ದುಡಿಮೆಯನ್ನು ಬಹುಮುಖ್ಯವಾಗಿ ಹೊರಗೆ ಹೊಲಗದ್ದೆಗಳಲ್ಲಿನ ದುಡಿಮೆಯನ್ನು ಕೀಳಾಗಿ ಶಿಷ್ಟಸಂಸ್ಕೃತಿಯು ಪರಿಗಣಿಸಿದೆ. ವಸ್ತುಸ್ಥಿತಿ ಏನಾಗಿದೆ ಅಂದರೆ ಮಹಿಳೆಯರು ಅಧಿಕ ಸಂಖ್ಯೆಯಲ್ಲಿ ಮನೆಯ ಹೊರಗಡೆ ದುಡಿಯುತ್ತಿದ್ದಾರೆ ಅಂದರೆ ಮನೆಯ ಕೆಲಸವನ್ನು ಮಾಡಿಕೊಂಡು ಕೃಷಿ ಭೂಮಿಯಲ್ಲಿ ಅದು ಭೂರಹಿತರಾಗಿ ಕೃಷಿ ದುಡಿಮೆಗಾರರಾಗಿ ಅವರ ದುಡಿಮೆಯು ಕೃಷಿಗೆ ಬೆನ್ನೆಲುಬಾಗಿದೆ. ಆದರೆ ಅರ್ಥಶಾಸ್ತ್ರದಲ್ಲಿ ಮತ್ತು ಆರ್ಥಿಕ ಬೆಳವಣಿಗೆಯಲ್ಲಿ ಶ್ರಮವು ಯಾರನ್ನು ಒಳಗೊಂಡಿದೆ ಅಂತ ನೋಡುವುದಾದರೆ, ಕಾರ್ಮಿಕರು, ದುಡಿಮೆಗಾರರು, ಇಂಜಿನಿಯರರು, ಗುಮಾಸ್ತರು, ಅಧ್ಯಾಪಕರು, ವಕೀಲರು, ಸಂಗೀತಗಾರರು, ವೈದ್ಯರು, ಇನ್ನಿತರರು ಅಂದರೆ ಶ್ರಮಕ್ಕೆ ಪ್ರತಿಫಲ ನಿರೀಕ್ಷೆ ಮಾಡಿ ಹಾಗೂ ಹಣಕ್ಕಾಗಿ ಸಲ್ಲಿಸುವ ದೈಹಿಕ ಅಥವಾ ಮಾನಸಿಕ ಶ್ರಮವನ್ನು ಒಳಗೊಂಡಿರುತ್ತದೆ.

ಅದು ಒಬ್ಬ ಮನುಷ್ಯನ ಬದುಕಿನ ಜೀವನದ ದಾರಿಯನ್ನು ಕಂಡುಕೊಳ್ಳಲು ಮಾಡಲಾದ ಎಲ್ಲಾ ದೈಹಿಕ ಅಥವಾ ಮಾನಸಿಕ ಪ್ರಯತ್ನಗಳನ್ನು ಪ್ರತಿನಿಧಿಸುತ್ತದೆ.

ದುಡಿಮೆ ಅಥವಾ ಶ್ರಮ ಇಲ್ಲದೆ ಯಾವ ವಸ್ತುವು ಅಥವಾ ತಂತ್ರಜ್ಞಾನವು ತನ್ನಿಂದ ತಾನೇ ಉತ್ಪಾದನೆ ಮಾಡಲಾಗುವುದಿಲ್ಲ. ಆದರೆ ತಮ್ಮ ದುಡಿಮೆ ಮತ್ತು ಶ್ರಮವನ್ನು ನಂಬಿಕೊಂಡು ದುಡಿಯುವಂತಹ ಭೂರಹಿತ ಕೃಷಿ ದುಡಿಮೆಗಾರರು ಭಾರತ ಮತ್ತು ಕರ್ನಾಟಕದಲ್ಲಿ ಅಧಿಕ ಸಂಖ್ಯೆಯಲ್ಲಿ ಭೂರಹಿತರಾಗಿ ಕೃಷಿಯಲ್ಲಿ ಉಳುಮೆ ಮಾಡುವುದು ಬಿತ್ತನೆ ಮಾಡುವುದು ಕಳೆ ತೆಗೆಯುವುದು, ಕಟಾವು ಮಾಡುವುದು, ಈ ಎಲ್ಲ ಕೆಲಸಗಳಲ್ಲಿ ಅಧಿಕ ಸಂಖ್ಯೆಯಲ್ಲಿ ಮಹಿಳೆಯರು ಮತ್ತು ೧೪ ವರ್ಷದ ಮಕ್ಕಳು ಅಲ್ಪಪ್ರಮಾಣದಲ್ಲಿ ಪುರುಷರು ದುಡಿಮೆಯನ್ನು ಮಾಡುತ್ತಿದ್ದಾರೆ. ಭೂರಹಿತರು ತಮ್ಮ ಜೀವನ ನಿರ್ವಹಣೆಗಾಗಿ ಯಾವುದೇ ಆಧುನಿಕ ಸ್ಕಿಲ್‌ಗಳನ್ನು ಹೊಂದಿರುವುದಿಲ್ಲ. ಈ ಕಾರಣದಿಂದ ತಮ್ಮ ದೈಹಿಕ ಶಕ್ತಿಯನ್ನು ಬಂಡವಾಳವಾಗಿ ಮಾಡಿಕೊಂಡು ಅದನ್ನು ಶಕ್ತಿಮೀರಿ ತಮ್ಮ ಶ್ರಮವನ್ನು ಹಾಕಿ ದುಡಿಮೆ ಮಾಡುವುದು ಮಾತ್ರ ಇವರಿಗೆ ಗೊತ್ತಿರುವ ಸ್ಕಿಲ್ ಆಗಿದೆ. ಅಲ್ಲದೆ ಇವರು ಶಿಕ್ಷಣವನ್ನು ಹೊಂದಿರುವುದಿಲ್ಲ. ಬಹುತೇಕ ಭೂರಹಿತ ಕೃಷಿ ದುಡಿಮೆಗಾರರು ಅವಿದ್ಯಾವಂತರಾಗಿದ್ದು ಯಾವುದೇ ಕಾನೂನಿನ ಅರಿವು ಕೂಡ ಇರುವುದಿಲ್ಲ. ಇವರ ಈ ಮುಗ್ಧತೆಯನ್ನು ಬಳಸಿಕೊಂಡು ಭೂಮಾಲೀಕ ವರ್ಗ ಇವರ ಶ್ರಮವನ್ನು ಅಧಿಕ ಪ್ರಮಾಣದಲ್ಲಿ ದೋಚಿಕೊಂಡು ಕನಿಷ್ಠ ಪ್ರಮಾಣದ ಕೂಲಿಯನ್ನು ನೀಡುತ್ತಾರೆ. ಭೂಮಾಲೀಕರು ಕೊಡುವ ಕನಿಷ್ಠ ಪ್ರಮಾಣದ ಕೂಲಿಯನ್ನು ತೆಗೆದುಕೊಂಡು ಅಧಿಕ ಪ್ರಮಾಣದ ಶ್ರಮದ ಮಿಗುತಾಯ ಮೌಲ್ಯವನ್ನು ಮಾಲೀಕ ವರ್ಗ ಪಡೆಯುತ್ತದೆ. ಈ ಅಧಿಕ ಪ್ರಮಾಣದ ದುಡಿಮೆ ಅಥವಾ ಶ್ರಮವನ್ನು ಕಾರ್ಲ್ ಮಾರ್ಕ್ಸ್ ಅವರು ಹೆಚ್ಚುವರಿ ದುಡಿಮೆಯನ್ನು ಮಿಗುತಾಯ ಮೌಲ್ಯ ಎಂದು ಕರೆದಿದ್ದಾರೆ. ಈ ಭೂರಹಿತ ಕೃಷಿ ದುಡಿಮೆಗಾರರು ಕೃಷಿಯ ಸಮಯದಲ್ಲಿ ಕೃಷಿಯ ಕೆಲಸವನ್ನು ಮಾಡಿ, ಕೃಷಿಯಲ್ಲಿ ಕೆಲಸವಿಲ್ಲದ ಸಮಯದಲ್ಲಿ ದೊಡ್ಡ ದೊಡ್ಡ ಗೋಧಾಮಗಳಲ್ಲಿ ಅಥವಾ ಕೋಲ್ಡ್ ಸ್ಟೋರೇಜ್‌ಗಳಲ್ಲಿ ಕೆಲಸವನ್ನು ಮಾಡುತ್ತಾರೆ. ಇಂತಹ ಕೆಲಸದಲ್ಲಿ ಪುರುಷರೇ ಅಧಿಕ ಸಂಖ್ಯೆಯಲ್ಲಿ ದುಡಿಮೆ ಮಾಡುತ್ತಾರೆ. ಹೀಗೆ ಶ್ರಮವು ಬ್ರಿಟಿಷರು ಬರುವುದಕ್ಕಿಂತ ಪೂರ್ವದಲ್ಲಿ ಭಾರತದ ಮೇಲ್ವರ್ಗದ ಭೂಮಾಲೀಕರು ಭೂಮಿ ಇಲ್ಲದ ಭೂರಹಿತರನ್ನು ತಮ್ಮ ಜಮೀನುಗಳಲ್ಲಿ ಜೀತಕ್ಕೆ ಇಟ್ಟುಕೊಳ್ಳುವುದನ್ನು ಮಾಡುತ್ತಿದ್ದರು. ಇಂತಹ ಸಂದರ್ಭದಲ್ಲಿ ಅವರಿಗೆ ಬೇಕಾದ ಕಾಳುಕಡಿಗಳನ್ನು ನೀಡಿ ಯಾವುದೇ ಕೂಲಿಯನ್ನು ನೀಡದೆ ತಾವು ಕೊಡುವ ಇಂತಹ ಸಣ್ಣಪುಟ್ಟ ಸಹಾಯವನ್ನು ಭೂರಹಿತ ಕೃಷಿ ದುಡಿಮೆಗಾರರು ಅವಲಂಬಿಸಿಕೊಂಡು ತಮ್ಮ ಜೀವನ ಸಾಗಿಸುತ್ತಿದ್ದರು ಮತ್ತು ಸಾಗಿಸುತ್ತದ್ದಾರೆ. ಒಂದು ವೇಳೆ ಭೂಮಾಲೀಕರ ವಿರುದ್ಧ ಮಾತನಾಡಿದರೆ ಅಥವಾ ತಮಗೆ ಇಷ್ಟು ಕೂಲಿ ಕೊಡು ಎಂದು ಕೇಳಿದರೆ ಅಂತಹ ಭೂರಹಿತ ಕೃಷಿ ದುಡಿಮೆಗಾರರು ಬದುಕುಳಿಯುವ ಯಾವುದೇ ಸಾಧ್ಯತೆಗಳಿರಲಿಲ್ಲ. ಇಂತಹ ನಿಕೃಷ್ಟ ಜೀವನವನ್ನು ನಡೆಸಿಕೊಂಡು ಬರುತ್ತಿದ್ದರು ಯಾವುದೇ ಭೂ ಮಾಲೀಕರಿಗೆ ಅಥವಾ ಮೇಲ್ವರ್ಗದವರಿಗೆ ಭೂರಹಿತ ಕೃಷಿ ದುಡಿಮೆಗಾರರ ಬದುಕು ಮನುಷ್ಯರ ಬದುಕಂತೆ ಪರಿಗಣಿಸುತ್ತಿರಲಿಲ್ಲ. ಅದರಲ್ಲಿ ಭಾರತವು ವರ್ಣಾಶ್ರಮ, ಜಾತಿ ಪದ್ಧತಿಯ ಬೇರುಗಳು ಬಹಳ ಗಟ್ಟಿಯಾಗಿ ನೆಲೆಯೂರಿದ್ದವು. ಜಾತಿ ವ್ಯವಸ್ಥೆಯು ಬಹಳ ಜಟಿಲಗೊಂಡಿತ್ತು. ಕೆಳ

ವರ್ಗದ ಜನಾಂಗಗಳನ್ನು ಪ್ರಾಣಿಗಳಿಗಿಂತ ಕನಿಷ್ಠವಾಗಿ ಮತ್ತು ನಿಕೃಷ್ಟವಾಗಿ ಕಾಣುತ್ತಿದ್ದರು. ಭಾರತಕ್ಕೆ ೧೯೪೭ ಆಗಸ್ಟ್ ೧೫ರಂದು ಸ್ವಾತಂತ್ರ್ಯ ಸಿಕ್ಕಿದೆ. ಆ ಸ್ವಾತಂತ್ರ್ಯವು ಎಲ್ಲರನ್ನೂ ಒಳಗೊಳ್ಳುವ ಸ್ವಾತಂತ್ರ್ಯವಾಗಿರಬೇಕಾಗಿತ್ತು. ಡಾ. ಬಿ. ಆರ್. ಅಂಬೇಡ್ಕರ್ ಅವರು ಸಂವಿಧಾನದಲ್ಲಿ ಎಲ್ಲರನ್ನು ಒಳಗೊಳ್ಳುವಂತಹ ಅಭಿವೃದ್ಧಿಯ ಮಾದರಿಗಳನ್ನು ರೂಪಿಸಿದ್ದಾರೆ. ಆದರೆ ಆ ಸಂವಿಧಾನದ ಆಶಯಗಳನ್ನು ಕಾಪಾಡಿಕೊಂಡು ಹೋಗಬೇಕಾಗಿದ್ದ ಕಾರ್ಯಾಂಗ, ಶಾಸಕಾಂಗ, ನ್ಯಾಯಾಂಗ ವ್ಯವಸ್ಥೆಯಲ್ಲಿ ಇಂತಹ ಭೂರಹಿತ ಕೃಷಿ ದುಡಿಮೆಗಾರರು ಮತ್ತು ತಳವರ್ಗದ ಜನರು ಹಾಗೂ ಮಹಿಳೆಯರನ್ನು ಒಳಗೊಳ್ಳಬೇಕಾಗಿತ್ತು. ದುರಂತವೆಂದರೆ ಆ ಎಲ್ಲಾ ಸ್ಥಾನಗಳಲ್ಲಿ ಬಹುತೇಕ ಮೇಲ್ವರ್ಗದ ಮತ್ತು ಕಡಿಮೆ ಸಂಖ್ಯೆಯಲ್ಲಿ ಈ ವರ್ಗದ ಜನರು ಪ್ರತಿನಿಧಿಸುತ್ತಿದ್ದಾರೆ ಮತ್ತು ಕೆಲವು ಕಡೆ ಅವರ ಪ್ರಾತಿನಿಧ್ಯವೇ ಇಲ್ಲ. ಮಹಿಳೆಯರ ಪ್ರಮಾಣ ಈ ಅಂಗಗಳಲ್ಲಿ ಅತ್ಯಂತ ಕನಿಷ್ಠ ಪ್ರಮಾಣದಲ್ಲಿದೆ. ಆದ್ದರಿಂದ ಇಂತಹ ಸ್ವಾತಂತ್ರ್ಯವೂ ನಮ್ಮ ಸಾಮಾಜಿಕ, ಆರ್ಥಿಕ, ರಾಜಕೀಯ ವ್ಯವಸ್ಥೆಯನ್ನು ರೂಪಿಸಿಕೊಳ್ಳುವಾಗ ಬಲಾಢ್ಯರು ಭೂಮಿಯ ಒಡೆತನವನ್ನು ತಮ್ಮಲ್ಲಿ ಉಳಿಸಿಕೊಂಡು ಬಹುತೇಕ ಸಮುದಾಯಗಳನ್ನು ಕೇವಲ ಯಾಚಕರಂತೆ ಬದುಕುವಂತೆ ನೋಡಿಕೊಳ್ಳುವಲ್ಲಿ ಯಶಸ್ವಿಯಾಗಿದೆ. ಭಾರತದ ಸಂವಿಧಾನದಲ್ಲಿ ಸಮಾನತೆಯ ಬಗ್ಗೆ ಮತ್ತು ಆರ್ಥಿಕ, ರಾಜಕೀಯ ಅವಕಾಶಗಳು ಯಾವುದೇ ತಾರತಮ್ಯವಿಲ್ಲದೆ ಎಲ್ಲರಿಗೂ ಬದುಕಲು ಅವಕಾಶ ಮಾಡಿಕೊಟ್ಟಿದೆ. ಆದರೆ ಭೂಮಿ ಇಲ್ಲದೆ ದುಡಿದು ತಿನ್ನುವ ಕುಟುಂಬಗಳಿಗೆ ಭೂಮಿ ಸಿಕ್ಕಿಲ್ಲ. ಭಾರತಕ್ಕೆ ಸ್ವಾತಂತ್ರ್ಯ ಸಿಕ್ಕು ಶತಮಾನೋತ್ಸವ ಸಮಿಪಿಸಿದರು ವಲಸೆ ಹೋಗುವುದು ಮತ್ತು ಅಧಿಕ ಪ್ರಮಾಣದ ದುಡಿಮೆಯನ್ನು ಅಥವಾ ಶ್ರಮವನ್ನು ದೋಚುವಂತಹ ಸ್ಥಿತಿ ಇನ್ನೂ ಕೂಡ ತಪ್ಪಿಲ್ಲ. ಇದು ಹೆಚ್ಚಿನ ಪ್ರಮಾಣದಲ್ಲಿ ಅಸಮಾನತೆ ಹೆಚ್ಚುತ್ತಾ ಸಾಗುತ್ತಿದೆ. ದೇಶಕ್ಕೆ ಸಿಕ್ಕ ಸ್ವಾತಂತ್ರ್ಯ ಪ್ರತಿಶಿಷ್ಟ ಜನರಿಗೆ ಅನುಕೂಲವಾಗುತ್ತಿದೆ ಹೊರತು ಬಡವರ, ದೀನದಲಿತರ, ಭೂರಹಿತ ಕೃಷಿ ದುಡಿಮೆಗಾರರ ಮತ್ತು ವಲಸೆಯನ್ನು ಹರಿಸಿ ಬದುಕುತ್ತಿರುವವರಿಗೆ ಪ್ರತಿಕೂಲವಾಗುತ್ತಿದೆ. ಕರ್ನಾಟಕದಲ್ಲಿ ಮೂರನೆಯ ಒಂದರಷ್ಟು ಕುಟುಂಬಗಳಿಗೆ ಭೂಮಿಯ ಇಲ್ಲ. ಇನ್ನು ಭೂಮಿ ಇರುವ ಮೂರನೆಯ ಎರಡರಷ್ಟು ಕುಟುಂಬಗಳಲ್ಲಿ ಶೇಕಡಾ ೭೮ರಷ್ಟು ಜನರಿಗೆ ಒಂದರಿಂದ ಎರಡು ಎಕರೆಯಷ್ಟು ಭೂಮಿ ಹೊಂದಿದ್ದಾರೆ. ಒಟ್ಟು ಹಿಡುವಳಿಯ ಶೇಕಡ ೩೫ ರಿಂದ ೪೦ರಷ್ಟು, ಶೇಕಡ ೭೫ರಷ್ಟಿರುವ ಸಣ್ಣ  ಹಿಡುವಳಿದಾರರಲ್ಲಿದೆ.

ಈ ಮೇಲಿನ ಎಲ್ಲ ಸಂಗತಿಗಳ ಕಾರಣದಿಂದ ಬಹುದೊಡ್ಡ ಪ್ರಮಾಣದ ಆರ್ಥಿಕ ಅಸಮಾನತೆ ಮತ್ತು ಉಳ್ಳವರು ಇಲ್ಲದವರು ವರ್ಗಗಳು ಸೃಷ್ಟಿಯಾಗಿದೆ. ಜಾಗತಿಕ ಸಂಪನ್ಮೂಲ ವರದಿ (೨೦೧೪) ಪ್ರಕಾರ ೨೦೦೦ದಲ್ಲಿ ಭಾರತದ ಶೇಕಡ ಒಂದರಷ್ಟು ಶ್ರೀಮಂತರು ನಮ್ಮ ದೇಶದ ಸಂಪತ್ತಿನ ಶೇಕಡ ೩೭ರಷ್ಟನ್ನು ಹೊಂದಿದ್ದರು. ೨೦೦೪ರಲ್ಲಿ ಇದೇ ಶ್ರೀಮಂತರು ಹೊಂದಿರುವ ಸಂಪತ್ತಿನ ಪ್ರಮಾಣ ಶೇಕಡ ೪೯ಕ್ಕೆ ಏರಿದೆ. ಶೇಕಡ ೧೦ರಷ್ಟಿರುವ ಅನುಕೂಲಸ್ಥರು ೨೦೦೦ದಲ್ಲಿ ದೇಶದ ಸಂಪತ್ತಿನ ಶೇಕಡ ೬೦ರಷ್ಟನ್ನು ಹೊಂದಿದ್ದರು. ೨೦೦೪ರಲ್ಲಿ ಇವರು ಹೊಂದಿರುವ ಸಂಪತ್ತಿನ ಪ್ರಮಾಣ ಶೇಕಡ ೭೪ಕ್ಕೆ ಏರಿದೆ. ಉಳಿದ ಶೇಕಡ ೯೦ರಷ್ಟು ಜನರು ಶೇಕಡ ೨೫ರಷ್ಟು ಸಂಪತ್ತನ್ನು ಹಂಚಿಕೊಳ್ಳುತ್ತಿದ್ದರೆ. ಅಂದರೆ ಬಹುತೇಕ ಈ ದೇಶದ ೯೦ರಷ್ಟು ಇರುವ ಜನರು ಭೂಮಿಯ ಒಡೆತನ ಕಳೆದುಕೊಂಡಿದ್ದಾರೆ. ಆದರೆ ಆ ಸಂಪತ್ತನ್ನು

ಇವರಿಗೆ ಸಿಗದಂತೆ ನೋಡಿಕೊಳ್ಳುತ್ತಿದ್ದಾರೆ. ಇದು ಕೇವಲ ಆರ್ಥಿಕ ಅಸಮಾನತೆಯಾಗಿದೆ. ಇನ್ನೂ ರಾಜಕೀಯ, ಸಾಮಾಜಿಕ, ಧಾರ್ಮಿಕತೆಯಿಂದಾಗಿ ಭೂರಹಿತ ಕೃಷಿಕರು ತೀರಾ ಸಂಕಷ್ಟವನ್ನು ಎದುರಿಸುತ್ತಿದ್ದಾರೆ. ಸರಕಾರವು ಭೂರಹಿತ ಕೃಷಿ ದುಡಿಮೆಗಾರರು ಅನುಭವಿಸುವ ಯಾತನೆಗಳನ್ನು ಮತ್ತು ಅವರ ಶ್ರಮದ ಕಷ್ಟಕಾರ್ಪಣ್ಯವನ್ನು ಕಂಡು ಅರವತ್ತು ಎಪ್ಪತ್ತರ ದಶಕದಲ್ಲಿ ಭೂ ಸುಧಾರಣೆ ಕಲ್ಪನೆ ಪ್ರಚಾರಕ್ಕೆ ಬಂತು. ಊಳುವವನೇ ಹೊಲದೊಡೆಯನಾಗುವುದು ಅಥವಾ ನಿಜವಾಗಿ ಕೃಷಿ ಮಾಡುವವನೇ, ಭೂಮಿಯ ಮಾಲೀಕನಾಗುವುದು ಭೂ ಸುಧಾರಣೆಯ ಉದ್ದೇಶ ಮತ್ತು ಅನುಷ್ಠಾನಗೊಳಿಸುವುದಾಗಿತ್ತು. ಭಾರತ ಮತ್ತು ಕರ್ನಾಟಕದಲ್ಲಿ ಈ ಸುಧಾರಣೆಯನ್ನು ಜಾರಿಗೆಗೊಳಿಸಲು ಸರ್ಕಾರವು ಮುಂದಾಗಿತ್ತು. ಕರ್ನಾಟಕ ಸರ್ಕಾರವು ಸಹ ಡಿ. ದೇವರಾಜ ಅರಸ ಅವರು ಮುಖ್ಯಮಂತ್ರಿ ಇದ್ದಾಗ ಕರ್ನಾಟಕದಲ್ಲಿ ಭೂ ಸುಧಾರಣೆ ನಡೆಯಿತು. ಅದು ಕರ್ನಾಟಕದ ಎಲ್ಲಾ ಜಿಲ್ಲೆಗಳಲ್ಲಿ ಸಮರ್ಪಕವಾಗಿ ನಡೆಯಲಿಲ್ಲ. ದಕ್ಷಿಣ ಕರ್ನಾಟಕದಲ್ಲಿ ಸ್ವಲ್ಪ ಪ್ರಮಾಣದಲ್ಲಿ ನಡೆದರೆ, ಹೈದ್ರಾಬಾದ್ ಕರ್ನಾಟಕ (ಕಲ್ಯಾಣ ಕರ್ನಾಟಕ) ಅಥವಾ ಉತ್ತರ ಕರ್ನಾಟಕದಲ್ಲಿ ಅದರ ಪ್ರಮಾಣ ತೀರಾ ಕನಿಷ್ಠ ಮಟ್ಟದಲ್ಲಿ ನಡೆದಿದೆ. ಯಾಕೆ ಈ ಭೂ ಸುಧಾರಣೆ ಕಾಯ್ದೆ ಪರಿಣಾಮಕಾರಿ ಆಗಲಿಲ್ಲ ಅಂದರೆ ಬಹುತೇಕ ಶ್ರೀಮಂತರು ಮತ್ತು ಮೇಲ್ವರ್ಗದ ಭೂಮಾಲೀಕರು ಸರಕಾರದ ಮೇಲೆ ಒತ್ತಡ ಹಾಕಿದ್ದು ಹಾಗೂ ರಾಜಕಾರಣಿಗಳು ಸಹ ಅತ್ಯಧಿಕ ಪ್ರಮಾಣದಲ್ಲಿ ಭೂಮಿಯನ್ನು ಹೊಂದಿದ್ದರು. ಆದ್ದರಿಂದ ಈ ಸುಧಾರಣೆಯು ಅಷ್ಟೊಂದು ಪ್ರಮಾಣದಲ್ಲಿ ಅನುಷ್ಠಾನಗೊಳ್ಳಲಿಲ್ಲ. ಈ ಎಲ್ಲಾ ಅಂಶಗಳು ಭೂಮಿ ಇಲ್ಲದ ಭೂರಹಿತ ಕೃಷಿ ದುಡಿಮೆಗಾರರಿಗೆ ಭೂಮಿ ಅನ್ನುವುದು ದಕ್ಕಲಿಲ್ಲ. ಈಗ ಮತ್ತೆ ಅವರು ತಮ್ಮ ದುಡಿಮೆ ಮತ್ತು ಶ್ರಮವನ್ನೇ ನಂಬಿಕೊಂಡು ಜೀವನ ಸಾಗಿಸುವಂತಹ ಅತ್ಯಂತ ಶೋಚನೀಯ ಸ್ಥಿತಿ ನಿರ್ಮಾಣವಾಗಿದೆ. ಅಂದರೆ ದೇಶದ ಒಟ್ಟು ಆರ್ಥಿಕತೆಯಲ್ಲಿ ಭೂರಹಿತ ಕೃಷಿ ದುಡಿಮೆಗಾರರ ದುಡಿಮೆ ಮತ್ತು ಶ್ರಮದ ಪಾತ್ರ ಮಹತ್ವ ಎಂಬುದನ್ನು ಸರ್ಕಾರಗಳು ಗಮನಕ್ಕೆ ತೆಗೆದುಕೊಳ್ಳಬೇಕು.

**ಭೂರಹಿತ ಕೃಷಿ ದುಡಿಮೆಗಾರರ ಶೋಷಣೆ**

ಶೋಷಣೆ ಎಂಬ ಪದವು ಬಹಳ ವಿಸ್ತೃತವಾಗಿದ್ದು ಅದನ್ನು ಬೇರೆ ಬೇರೆ ಆಯಾಮಗಳಲ್ಲಿ ಚರ್ಚಿಸಬಹುದು. ಈ ಲೇಖನಕ್ಕೆ ಪೂರಕವಾಗಿ ಭೂರಹಿತ ಕೃಷಿ ದುಡಿಮೆಗಾರರ ಶೋಷಣೆಯನ್ನು ಪುರುಷರು ಮತ್ತು ಮಹಿಳೆಯರ ನೆಲೆಯಲ್ಲಿ ನೋಡಲಾಗಿದೆ. ಭೂಮಾಲೀಕರು ಭೂಮಿ ಹೊಂದಿರದೆ ಇರುವ ಜನರನ್ನು ತಮ್ಮ ಹೊಲಗದ್ದೆಗಳಲ್ಲಿ ದುಡಿಸಿಕೊಳ್ಳಲು ಬಯಸುತ್ತಾರೆ. ಏಕೆಂದರೆ ಭೂಮಿ ಇಲ್ಲದವರು ತಮ್ಮ ಉಪಜೀವನಕ್ಕಾಗಿ ಮತ್ತು ಬದುಕಿನ ಎಲ್ಲಾ ಕಾರ್ಯಚಟುವಟಿಕೆಗಳನ್ನು ನೀಗಿಸಿಕೊಳ್ಳಲು ತಮ್ಮ ಶ್ರಮಶಕ್ತಿಯನ್ನೇ ಅವಲಂಬಿಸಿರುತ್ತಾರೆ. ಈ ಪರಿಸ್ಥಿತಿಯನ್ನು ಚೆನ್ನಾಗಿ ಅರಿತುಕೊಂಡಿರುವಂತಹ ಭೂಮಾಲೀಕರು ಇವರನ್ನೇ ತಮ್ಮ ಜಮೀನುಗಳಲ್ಲಿ ದುಡಿಸಿಕೊಳ್ಳಲು ಯೋಗ್ಯರೆಂಬ ತೀರ್ಮಾನಕ್ಕೆ ಬಂದಿರುತ್ತಾರೆ ಮತ್ತು ತಾವು ಕೊಡುವ ಕೂಲಿಯನ್ನು ಯಾವ ಪ್ರಶ್ನೆ ಇಲ್ಲದೆ ಸ್ವೀಕರಿಸುತ್ತಾರೆ ಎಂಬ ಧೋರಣೆಯನ್ನು ಹೊಂದಿರುತ್ತಾರೆ. ಆದ್ದರಿಂದ ಭೂರಹಿತ ಕೃಷಿ ದುಡಿಮೆಗಾರರ ಶೋಷಣೆಯು ಅಧಿಕ ಮಟ್ಟದಲ್ಲಿ ನಡೆದಿರುವುದನ್ನು ಈ ಲೇಖವು ಸ್ಪಷ್ಟಪಡಿಸುತ್ತದೆ. ಇಂತಹ ಶೋಷಣೆಯು ಎರಡು ರೀತಿಯಲ್ಲಿ

ನಡೆಯುತ್ತದೆ. ಒಂದು ಅವರ ಹಕ್ಕುಗಳನ್ನು ವಂಚಿಸುವುದು. ಏಕೆಂದರೆ ಭೂರಹಿತ ಕೃಷಿ ದುಡಿಮೆಗಾರರು ಅವಿದ್ಯಾವಂತರಾಗಿರುತ್ತಾರೆ. ಅವರಿಗೆ ಕಾನೂನಾತ್ಮಕವಾದ ಅರಿವು ಇರುವುದಿಲ್ಲ. ಮತ್ತೊಂದು ಅವರ ಮೇಲೆ ದೌರ್ಜನ್ಯ, ಹಲ್ಲೆ, ದಬ್ಬಾಳಿಕೆ, ಅತ್ಯಾಚಾರ, ಕೊಲೆ ಮುಂತಾದ ಸ್ವರೂಪದಲ್ಲಿ ಶೋಷಣೆ ನಿರಂತರವಾಗಿ ನಡೆದರೂ ಅವರು ಯಾವುದೇ ರೀತಿಯ ಪ್ರತಿಭಟನೆ ಮತ್ತು ಪ್ರಕರಣ ದಾಖಲಿಸುವುದಿಲ್ಲ. ಭೂರಹಿತ ಕೃಷಿ ದುಡಿಮೆಗಾರರು ಭೂಮಿ ಇಲ್ಲದ ಭೂಹೀನರು, ಬಡವರು, ಮನೆ ಕಟ್ಟಿಕೊಳ್ಳಲು ಅಂಗೈ ಅಗಲ ಜಾಗ ಇಲ್ಲದವರು, ಬಾಡಿಗೆ ಮನೆಯಲ್ಲಿ ವಾಸಿಸುತ್ತಿರುವವರು ಅಥವಾ ಟೀನ್ ಶೆಡ್ಡುಗಳಲ್ಲಿ ವಾಸಿಸುತ್ತಿರುವವರು ಮತ್ತು ಭೂಮಾಲೀಕರು ನಿರ್ಮಿಸಿ ಕೊಟ್ಟಿರುವ ಜೋಪಡಿಗಳಲ್ಲಿ ವಾಸ ಮಾಡುತ್ತಿರುವುದರಿಂದ ಇವರ ಮೇಲೆ ದೌರ್ಜನ್ಯಗಳು ಮತ್ತು ಮಹಿಳೆಯರ ಮೇಲೆ ಅತ್ಯಾಚಾರಗಳು ನಡೆದರೂ ಅವರ ಹಂಗಿನ ಬದುಕಿನಿಂದಾಗಿ ಇವೆಲ್ಲವನ್ನು ಸಹಿಸಿಕೊಳ್ಳುತ್ತಾರೆ. ಈ ಭೂರಹಿತ ಕೃಷಿ ದುಡಿಮೆಗಾರರು ತಮ್ಮ ರಕ್ಷಣೆಗಾಗಿ ಕಾನೂನಾತ್ಮಕವಾಗಿ ಹೋರಾಟ ಮಾಡಲು ಅರಿವು ಇಲ್ಲದಿರುವುದು ಮತ್ತು ಇಂತಹ ಭೂಮಾಲೀಕರ ವಿರುದ್ಧ ಧ್ವನಿ ಎತ್ತುವುದು ಬಹಳ ತೀರ ಕಡಿಮೆಮಟ್ಟದಲ್ಲಿದೆ. ಒಂದು ವೇಳೆ ಅವರ ವಿರುದ್ಧ ತಿರುಗಿ ಬಿದ್ದರೆ ಭೂ ಮಾಲೀಕರು ಕೊಲೆಯನ್ನು ಸಹ ಮಾಡಿರುವ ನಿದರ್ಶನಗಳುಂಟು ಮತ್ತು ಇವರು ರಾಜಕೀಯ ಪ್ರಭಾವದಿಂದ ಮತ್ತು ಜಾತಿಯ ಪ್ರಭಾವದಿಂದ ತಮ್ಮ ನೀಚ ಪ್ರವೃತ್ತಿಗಳನ್ನು ಇಂತಹ ಸಮುದಾಯದ ಮೇಲೆ ಮತ್ತೆ ಮತ್ತೆ ಮಾಡುತ್ತಲಿರುತ್ತಾರೆ.

ಭೂರಹಿತ ಕೃಷಿ ದುಡಿಮೆಗಾರರು ಸಾಮಾಜಿಕ ಮತ್ತು ಆರ್ಥಿಕವಾಗಿ ಹಿಂದುಳಿದಿದ್ದು, ಇವರ ಮೇಲೆ ದೌರ್ಜನ್ಯಗಳು, ದಬ್ಬಾಳಿಕೆಗಳು ಮತ್ತು ಶೋಷಣೆಗಳನ್ನು ಪ್ರಜ್ಞಾಪೂರ್ವಕವಾಗಿ ಮೇಲ್ಜಾತಿ ವರ್ಗದವರು ಮಾಡುತ್ತಲೇ ಬಂದಿದ್ದಾರೆ ಮತ್ತು ಮಾಡುತ್ತಲಿದ್ದಾರೆ. ಹೀಗೆ ಗ್ರಾಮೀಣ ಪ್ರದೇಶದಲ್ಲಿ ಜಾತಿಯ ಹೆಸರಲ್ಲಿ, ಸಂಸ್ಕೃತಿಯ ಹೆಸರಲ್ಲಿ, ಶೋಷಣೆ ಇನ್ನೂ ಮುಂದುವರೆದಿರುವುದು ಗಮನಿಸಬಹುದು. ಕೃಷಿ ದುಡಿಮೆಗಾರರಿಗೆ ಕಡಿಮೆ ಕೂಲಿ ಕೊಟ್ಟು ಹೆಚ್ಚು ಸಮಯ ದುಡಿಸಿಕೊಳ್ಳುವುದು ಕೂಡ ಜೀತ ಪದ್ಧತಿಯ ಸ್ವರೂಪದ ಶೋಷಣೆಯು ನಮ್ಮ ಕಣ್ಮುಂದೆ ಕಾಣುತ್ತದೆ. ಭೂಮಾಲೀಕರ ಅಧೀನದಲ್ಲಿ ದುಡಿಯುವಂಥ ಕಾರ್ಮಿಕರು ಅವರ ದೌರ್ಜನ್ಯವನ್ನು ನಿರಂತರ ಮತ್ತು ಸತತವಾಗಿ ಎದುರಿಸಬೇಕಾದ ಸನ್ನಿವೇಶಗಳು ಕಂಡುಬರುತ್ತವೆ. ಹಲವಾರು ಸಲ ಮಾಲೀಕರ ದೌರ್ಜನ್ಯಗಳನ್ನು ಮತ್ತು ಅವರು ಕೊಡುವ ಹಿಂಸೆಯನ್ನು ಸಹಿಸಿಕೊಂಡು ಹೋಗಬೇಕಾದ ಪರಿಸ್ಥಿತಿ ಭೂರಹಿತ ಕೃಷಿ ದುಡಿಮೆಗಾರರದ್ದಾಗಿದೆ. ಇಲ್ಲಿ ನಾವು ಪರಿಗಣಿಸಬೇಕಾದ ಸಂಗತಿ ಎಂದರೆ ಭೂಮಾಲೀಕರು ಅಥವಾ ಜಮೀನ್ದಾರರು ಸಂಪೂರ್ಣವಾಗಿ ಸರ್ವಾಧಿಕಾರಿಯ ಮನಸ್ಥಿತಿಯನ್ನು ಪ್ರದರ್ಶಿಸುತ್ತಾರೆ. ಭೂರಹಿತ ಕೃಷಿ ದುಡಿಮೆಗಾರರು ಒಂದು ವೇಳೆ ಅವರ ಹೊಲಗದ್ದೆಗಳಲ್ಲಿ ಕೆಲಸಕ್ಕೆ ಹೋಗದ ಸಂದರ್ಭದಲ್ಲಿ ಭೂಮಾಲೀಕರ ದೌರ್ಜನ್ಯಗಳು ಮತ್ತು ಅವರು ಕೊಡುವ ಮಾನಸಿಕ ಹಿಂಸೆಗಳು ಬೇರೆ ಸ್ವರೂಪದಲ್ಲಿರುತ್ತವೆ. ಹೀಗೆ ಭೂರಹಿತ ಕೃಷಿ ದುಡಿಮೆಗಾರರ ಮೇಲೆ ಒಂದಲ್ಲ ಒಂದು ರೀತಿಯಲ್ಲಿ ಶೋಷಣೆ ನಡೆಯುತ್ತಲೇ ಇರುತ್ತದೆ. ಭೂಮಾಲೀಕರು ತಾವು ಮಾಡುವಂತಹ ಇಂತಹ ದೌರ್ಜನ್ಯಗಳನ್ನು ಸಮರ್ಥನೆ ಮಾಡಿಕೊಂಡು ತಮ್ಮನ್ನು ರಕ್ಷಣೆ ಮಾಡಿಕೊಂಡಿರುವುದನ್ನು ನೋಡಬಹುದು. ಕಡಿಮೆ ಸಂಖ್ಯೆಯಲ್ಲಿರುವ ಭೂಮಾಲೀಕರು ಅತ್ಯಧಿಕ ಭೂಮಿಯನ್ನು ಹೊಂದಿರುವರು.

ಭೂಮಿ ಇಲ್ಲದೆ ದುಡಿಯುವವರ ಸಂಖ್ಯೆ ನಮ್ಮ ಭಾರತ ಮತ್ತು ಕರ್ನಾಟಕದಲ್ಲಿ  ಹೆಚ್ಚಿನ ಸಂಖ್ಯೆಯಲ್ಲಿರುವ ಭೂರಹಿತ ಕೃಷಿ ದುಡಿಮೆಗಾರರು ಇದ್ದರೂ ಭೂಮಾಲೀಕ ವರ್ಗವು ಇವರನ್ನು ತಮ್ಮ ಹಿಡಿತದಲ್ಲಿ ಇಟ್ಟುಕೊಂಡಿದ್ದಾರೆ. ಕಾರಣ ಈ ಭೂರಹಿತ ಕೃಷಿ ದುಡಿಮೆಗಾರರಿಗೆ ಸಾಲವನ್ನು ಕೊಟ್ಟು ತಮ್ಮ ಹಂಗಿನಲ್ಲಿ ಬದುಕುವಂತಹ ಪರಿಸ್ಥಿತಿಯನ್ನು ನಿರ್ಮಿಸಿದ್ದಾರೆ.  ೧೯೫೧ರ ಹಿಂದೆ ಭೂರಹಿತ ಕೃಷಿ ದುಡಿಮೆಗಾರರ ಅಥವಾ ಕಾರ್ಮಿಕರಿಗೂ ಅವರ ಹಕ್ಕುಗಳನ್ನು ಕಾಪಾಡುವ ಯಾವುದೇ ಕಾರ್ಮಿಕ ಕಾನೂನುಗಳು ರಚನೆಯಾಗಿರಲಿಲ್ಲ. ಕೃಷಿ ಕಾರ್ಮಿಕರಿಗೂ ಹಾಗೂ ಇತರ ಕಾರ್ಮಿಕರಿಗೂ ಸಹ ಅವರ ಹಕ್ಕಿನ ಬಗ್ಗೆ ಅರಿವಿಲ್ಲದಿರುವುದರಿಂದ ಮಾಲೀಕರಿಂದ ಶೋಷಣೆಗೆ ಒಳಗಾಗಿ ದುಡಿಯಬೇಕಾಗಿತ್ತು. "ಇಡೀ ಪ್ರಪಂಚದ ಉಗಮದಿಂದ ಹಿಡಿದು ಶೋಷಣೆಯು ಹಲವು ಬಗೆಯಲ್ಲಿ ನಡೆಯುತ್ತಾ ಬಂದಿದೆ. ಮನುಷ್ಯನು ಮೃಗವನ್ನು, ಪುರುಷರು ಮಹಿಳೆಯರನ್ನು,  ಒಂದು ಧರ್ಮದವರು ಮತ್ತೊಂದು ಧರ್ಮವನ್ನು, ಒಂದು ಜಾತಿಯವರು ಇನ್ನೊಂದು ಜಾತಿಯನ್ನು, ಸಮಾಜದ ಅತ್ಯಂತ ಮೇಲಿನವರು ಎಂದು ಗುರುತಿಸಿಕೊಂಡ ಮೇಲ್ವರ್ಗದವರು ಕೆಳಗಿನವರನ್ನು, ಬಲ್ಲಿದವರು ಬಡವರನ್ನು, ಈ ಅಂತರ ಅಸಮಾನತೆಯು ಮತ್ತು ಶೋಷಣೆಯು ಹಲವಾರು ಆಯಾಮಗಳಲ್ಲಿ ಹಾಗೂ ಬಗೆ ಬಗೆಯ ಸೋಗಿನಲ್ಲಿ ಶೋಷಣೆ ಮಾಡುತ್ತಾ ಬರಲಾಗಿದೆ. ಪ್ರಸ್ತುತ ಇಂತಹ ಶೋಷಣೆಗಳು ಮತ್ತು ಮುಂದೆಯೂ ಕೂಡ ನಡೆಯುವುದಿಲ್ಲ ಎಂದು ಹೇಳಲಾಗುವುದಿಲ್ಲ." ಇಂತಹ ಶೋಷಣೆಗಳು ಇತಿಹಾಸದುದ್ದಕ್ಕೂ ಇಲ್ಲದವರು ಉಳ್ಳವರ ದಬ್ಬಾಳಿಕೆಯನ್ನು ಸಹಿಸಿಕೊಂಡು ಬರಲಾಗಿದೆ. ಕಾರ್ಲ್ ಮಾರ್ಕ್ಸ್ ಅವರು ಕೂಡ ಇಂತಹ ಶೋಷಣೆಗಳ ಬಗ್ಗೆ ಹಾಗೂ ಕಾರ್ಖಾನೆಗಳಲ್ಲಿ ನಡೆಯುವ ಕಾರ್ಮಿಕರ ಶೋಷಣೆಯ ಬಗ್ಗೆ ಮಾತನಾಡಿದ್ದಾರೆ. ಅವರು ಹೇಳುವಂತೆ " ಕಾರ್ಖಾನೆಗಳಲ್ಲಿ ಕಾರ್ಮಿಕರು ಕಾರ್ಖಾನೆ ಮಾಲೀಕನ ಕೈಯಲ್ಲಿ ಶೋಷಣೆಗೆ ಒಳಗಾಗುತ್ತಾನೆ. ಕಾರ್ಮಿಕರ ಶ್ರಮದ ಫಲವಾಗಿ ಉತ್ಪತ್ತಿಯಾಗುವ ಸರಕುಗಳ ಮಾಲೀಕತ್ವವನ್ನು ಅವರಿಗೆ ನೀಡಲಾಗುವುದಿಲ್ಲ" ಎಂಬ ಸಂಗತಿಯನ್ನು ಗುರುತಿಸಿದ್ದಾರೆ. ಅಂದರೆ ಕಾರ್ಖಾನೆಗಳಲ್ಲಿ ಉತ್ಪತ್ತಿಯಾಗುವ ಉತ್ಪನ್ನಗಳ ಹಿಂದೆ ದುಡಿಮೆಗಾರರ ಶ್ರಮದ ಫಲಕ್ಕೆ ಕೇವಲ ಕೂಲಿಯನ್ನು ನೀಡಿ ಅದರ ಅಧಿಕ ಲಾಭವನ್ನು ಕಾರ್ಖಾನೆಗಳ ಮಾಲೀಕರು ಪಡೆಯುತ್ತಾರೆ. ಕಾಲ್ ಮಾರ್ಕ್ಸ್ ಅವರು ಚರಿತ್ರೆ ಒಳಗಡೆ ಇಂಥ ಶೋಷಣೆಯು ವರ್ಗ ಹೋರಾಟವಾಗಿ ಮುಂದುವರಿಯಬೇಕೆಂದು ಕರೆ ನೀಡುತ್ತಾರೆ. ಅಂದರೆ ಭೂಮಿ ಇಲ್ಲದಂತಹ ಕೃಷಿ ದುಡಿಮೆಗಾರರು ಹಾಗೂ ಇತರ ದುಡಿಮೆಗಾರರು ಈ ಎಲ್ಲಾ ವರ್ಗಗಳು ಒಂದಾಗಿ ಹೋರಾಟ ಮಾಡಿದಾಗ ತಮ್ಮ ಹಕ್ಕುಗಳನ್ನು ದಕ್ಕಿಸಿಕೊಳ್ಳಲು ಸಾಧ್ಯ ಎಂದು ಹೇಳುವುದರ ಮೂಲಕ ಹೋರಾಟದ ಸ್ವರೂಪವನ್ನು ರೂಪಿಸಿದ್ದಾರೆ. ಅವರು ಹೇಳುವಂತೆ "ಇಲ್ಲಿಯವರೆಗಿನ ಅಸ್ತಿತ್ವದಲ್ಲಿದ್ದ ಎಲ್ಲಾ ಸಮಾಜದ ಇತಿಹಾಸವು ವರ್ಗ ಹೋರಾಟಗಳ ಇತಿಹಾಸವಾಗಿದೆ. ಅಂದರೆ ತಮ್ಮ ಹಕ್ಕುಗಳನ್ನು ಪಡೆದುಕೊಳ್ಳಲು ಮತ್ತು ಕಾನೂನಾತ್ಮಕವಾದ ಸೌಲಭ್ಯಗಳನ್ನು ಪಡೆಯಲು ಹೋರಾಟ ಅನಿವಾರ್ಯ ಎಂಬ ಸಂಗತಿಯನ್ನು ಶೋಷಿತರ ಮುಂದಿಟ್ಟಿದ್ದಾರೆ.  ಈ ದೇಶಕ್ಕೆ ಸ್ವಾತಂತ್ರ್ಯ ಸಿಕ್ಕು ನೂರು ವರ್ಷಗಳು ಸಮೀಪಿಸಿದರೂ ಶೋಷಣೆಗಳು ನಿಂತಿಲ್ಲ. ಕಾರ್ಮಿಕರ ಕಾಯ್ದೆಗಳು ಭೂರಹಿತ ಕೃಷಿ ದುಡಿಮೆಗಾರರಿಗೆ ಬಹುತೇಕವಾಗಿ ಅನ್ವಯಿಸುವುದಿಲ್ಲ. ಏಕೆಂದರೆ ಭೂಮಿ ಇಲ್ಲದ ಇವರು ಭೂಮಾಲೀಕ ವರ್ಗವನ್ನು ನಂಬಿಕೊಂಡು ತಮ್ಮ ಬದುಕಿನ ನಿರ್ವಹಣೆಯನ್ನು ಮಾಡುತ್ತಾರೆ. ಆದ್ದರಿಂದ ಇಂತಹ ಭೂರಹಿತ ಕೃಷಿ ದುಡಿಮೆಗಾರರ ಅದರಲ್ಲೂ ವಿಶೇಷವಾಗಿ ಮಹಿಳೆಯರ ಮೇಲೆ ನಡೆಯುವ

ದೌರ್ಜನ್ಯಗಳು, ದಬ್ಬಾಳಿಕೆಗಳು, ಅತ್ಯಾಚಾರಗಳು ನಿರಂತರವಾಗಿ ನಡೆಯುತ್ತಿವೆ. ಇವುಗಳನ್ನು ತಡೆಯಬೇಕಾದರೆ ಹೋರಾಟಗಳು ನಡೆಯಬೇಕು ಮತ್ತು ಸರ್ಕಾರಗಳು ಸಂವಿಧಾನದ ಸಮಾನತೆಯ ಮತ್ತು ಭೂ ಮಿತಿಯ ಕಾನೂನುಗಳನ್ನು ಜಾರಿಗೆ ತಂದು ಇವರಿಗೆ ಭೂಮಿ ಸಿಗುವಂತೆ ನೋಡಿಕೊಳ್ಳಬೇಕು. ಮಹಿಳೆಯರ ಮೇಲೆ ನಡೆಯು ಅತ್ಯಾಚಾರ, ದೌರ್ಜನ್ಯಗಳನ್ನು ತಡೆಯಬೇಕಾದರೆ ಕಾನೂನಾತ್ಮಕವಾಗಿ ಕಠಿಣ ಶಿಕ್ಷೆಯನ್ನು ನ್ಯಾಯಾಲಯಗಳಲ್ಲಿ ಜಾರಿಯಾಗುವಂತೆ ನೋಡಿಕೊಳ್ಳಬೇಕು.

**ಪರಾಮರ್ಶನ ಗ್ರಂಥಗಳು**


- ಚಂದ್ರಪೂಜಾರಿ ಎಂ., ೨೦೦೪, ಜನಾಯೋಜನೆ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.
- ಚಂದ್ರಪೂಜಾರಿ ಎಂ., ೨೦೦೫, ಸಮಾಜ ಸಂಶೋಧನೆ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.
- ಚಂದ್ರಪೂಜಾರಿ ಎಂ., ೨೦೧೭, ಅಭಿವೃದ್ಧಿ ಸಿದ್ಧಾಂತಗಳು, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.
- ಚಂದ್ರಪೂಜಾರಿ ಎಂ., ೨೦೦೪, ಯಾಕೀಗ ಭೂಮಿ ಪ್ರಶ್ನೆ?, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.
- ಶಿವರಾಮ ಕಾರಂತ.ಕೆ., ೨೦೧೭, (ಪರಿಷ್ಕೃತ), ಚೋಮನ ದುಡಿ, ಸ್ವಪ್ನ ಬುಕ್ ಹೌಸ್, ಬೆಂಗಳೂರು.
- ಚಂದ್ರಶೇಖರ. ಟಿ.ಆರ್., ೨೦೦೫, ದಲಿತ ಅಧ್ಯಯನ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.
- ಚಂದ್ರಶೇಖರ. ಟಿ.ಆರ್., ೨೦೧೦, ಹಕ್ಕು–ಹಂಗು, ಅಭಿವೃದ್ಧಿ ಅಧ್ಯಯನ ಪ್ರಬಂಧಗಳು, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.
- ಚಂದ್ರಶೇಖರ. ಟಿ.ಅರ್. ೨೦೧೩, ಕಷ್ಟಕುಲದ ಕಥೆ, ದಲಿತರ ಸಬಲೀಕರಣ ಅಧ್ಯಯನಗಳು, ಲಡಾಯಿ ಪ್ರಕಾಶನ, ಗದಗ.
- Chinmay Tumbe, 2022, India Moving A History of Migration, Penguin Random House, India Pvt Ltd, Haryana.